ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಮಗಳಿಗೆ ನೀಡುತ್ತಿರುವ ಮಧ್ಯಂತರ ಜೀವನಾಂಶದ ಮೊತ್ತವನ್ನು ಹೆಚ್ಚಿಸಬೇಕೆಂದು ಕೋರಿ ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರ ಪತ್ನಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಶಮಿಗೆ ನೋಟಿಸ್ ಜಾರಿಗೊಳಿಸಲು ಸುಪ್ರೀಂ ಕೋರ್ಟ್ ಆದೇಶಿಸಿದೆ.


08 ನವೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 238 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629






ದೀಪೋತ್ಸವದ ದಿನದಂದೇ ಸುಟ್ಟು ಹೋದ ಗುಡಿಸಲು ! » 2





ವಂದೇ ಮಾತರಂ ಭಾರತದ ಏಕತೆಯ ಸಂಕೇತ » 3


ಬಿಹಾರ ಅಭಿವೃದ್ಧಿಗೆ ಲಾಲು-ರಾಹುಲ್‌ಗೆ ಕಾರ್ಯ ಸೂಚಿ ಇಲ್ಲ » 4


# ಪ್ರತಿಭಟನೆಗೆ ಮಣಿದ ಸರ್ಕಾರ: ದರ ಪರಿಷ್ಕರಣೆ

• ಪ್ರಜೋದಯ ವರದಿ

**ಬೆಂಗಳೂರು:** ಕಬ್ಬು ಬೆಳೆಗಾರರ ಹೋರಾಟಕ್ಕೆ ಮಣಿದ ರಾಜ್ಯ ಸರ್ಕಾರ, ಪ್ರತಿ ಟನ್ ಕಬ್ಬಿಗೆ 3,300 ರೂ. ಬೆಲೆ ನಿಗದಿ ಮಾಡಿ ಆದೇಶ ಹೊರಡಿಸಿದೆ. ಪ್ರತಿ ಟನ್‌ಗೆ 3,500 ರೈತರು ಬೇಡಿಕೆ ಇಟ್ಟಿದ್ದರು. ಆದರೆ, 3,300 ರೂ. ನೀಡಲು ಸರ್ಕಾರ ಒಪ್ಪಿಕೊಂಡಿದೆ. ಸಕ್ಕರೆ ಕಾರ್ಖಾನೆಗಳು 50 ರೂ. ಹಾಗು ರಾಜ್ಯ ಸರ್ಕಾರ 50 ರೂ. ರೈತರಿಗೆ ಸಬ್ಸಿಡಿ ನೀಡಲೂ ತೀರ್ಮಾನಿಸಲಾಗಿದೆ.

ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗಿನ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ರೈತ ಪ್ರತಿನಿಧಿಗಳು ಹಾಗು ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆಗೆ ಮಾತುಕತೆ ನಡೆಸಲಾಗಿದೆ. 3,500 ರೂ. ನೀಡಬೇಕೆಂಬುದು ರೈತರ ಬೇಡಿಕೆ. ಆದರೆ, ನೂರು ರೂ. ಹೆಚ್ಚುವರಿ ನಿಗದಿ ಮಾಡಲು ನಿರ್ಧಾರ ಮಾಡಲಾಗಿದೆ. ಸಕ್ಕರೆ ಕಾರ್ಖಾನೆ ಮಾಲೀಕರೂ ಒಪ್ಪಿಗೆ ಸೂಚಿಸಿದ್ದಾರೆಂದರು.

ಕಬ್ಬು ರಫ್ತು ಪ್ರಮಾಣ ಹೆಚ್ಚಳಕ್ಕೆ ಪ್ರಧಾನಿ ಮೋದಿ ಅವರನ್ನು ನಿಯೋಗದೊಂದಿಗೆ ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು. ರಾಜ್ಯ ಸರ್ಕಾರದ ಈ ತೀರ್ಮಾನವನ್ನು ಎಲ್ಲರೂ ಅನುಮೋದಿಸಿದ್ದಾರೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದ್ದಾರೆ.



- ಪ್ರತಿ ಟನ್ ಕಬ್ಬಿಗೆ 3,300 ರೂ. ಬೆಲೆ ನಿಗದಿ ಮಾಡಿ ಆದೇಶ
- ರೈತರು, ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆಗೆ ಮಾತುಕತೆ ಯಶಸ್ವಿ

### ಸರ್ಕಾರಕ್ಕೆ 300 ಕೋ.ರೂ. ಹೊರೆ

ನೂರು ರೂಪಾಯಿ ಹೆಚ್ಚಳದಿಂದ ರಾಜ್ಯ ಸರ್ಕಾರಕ್ಕೆ ಸುಮಾರು 300 ಕೋ.ರೂ. ಹೊರೆ ಆಗಲಿದೆ. ಸರ್ಕಾರ ನಿಗದಿ ಪಡಿಸಿದ ದರವನ್ನು ರೈತರು ಒಪ್ಪಿಕೊಳ್ಳುತ್ತಾರೆಂಬ ವಿಶ್ವಾಸ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇದೇ ವೇಳೆ ಭರವಸೆ ನೀಡಿದರು.

**ಪ್ರತಿಭಟನೆ ಹಿಂಪಡೆಯಲು ಮನವಿ**

ಬೆಳಗಾವಿ ಕಬ್ಬು ಬೆಳೆಗಾರರ ಪ್ರತಿಭಟನೆ ವಾಪಾಸ್ ಪಡೆಯಬೇಕೆಂದು ರೈತರಲ್ಲಿ ಮನವಿ ಮಾಡಿದ ಸಿದ್ದರಾಮಯ್ಯ ಅವರು, ಪ್ರತಿ ಜಿಲ್ಲೆಗೆ ಇಳುವರಿ ಪ್ರಮಾಣ ಭಿನ್ನವಾಗಿದೆ. ಆದರೆ, ನೂರು ರೂಪಾಯಿ ಹೆಚ್ಚಳ ನಿರ್ಧಾರ ಎಲ್ಲಾ ಜಿಲ್ಲೆಗಳಿಗೆ ಅನ್ವಯವಾಗುತ್ತದೆ. ಇದರಲ್ಲಿ ಕಟಾವು ಹಾಗು ಸಾಗಣೆ ವೆಚ್ಚ ಹೊರತಾಗಿದೆ ಎಂದರು.

ರಾಜ್ಯದಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಇದ್ದು, ಈ ಪೈಕಿ 11 ಸಹಕಾರಿ ವಲಯದಲ್ಲಿ ಇವೆ. ಒಂದು ಸರ್ಕಾರಿ ಸಕ್ಕರೆ ಕಾರ್ಖಾನೆ ಹಾಗೂ ಉಳಿದವು ಖಾಸಗಿ ಸಕ್ಕರೆ ಕಾರ್ಖಾನೆಗಳಾಗಿವೆ ಎಂದು ವಿವರಿಸಿದರು.

**ಬೆಳೆಗಾರರ ಹೋರಾಟಕ್ಕೆ ಬೆಂಬಲ**

ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಮಸ್ಯೆ ಬಗೆಹರಿಸಲು ಸಿದ್ಧರಿದ್ದೇವೆ. ಕೇಂದ್ರ ಸರ್ಕಾರ ಪರಿಹರಿಸಬೇಕಾದ ಸಮಸ್ಯೆಗೂ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರೆ ಹೇಗೆ. ಸಕ್ಕರೆಗೆ ಎಂಎಸ್‌ಪಿ, ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡುವುದು ಕೇಂದ್ರ ಸರ್ಕಾರ. ಎಥೆನಾಲ್ ಹಂಚಿಕೆ, ಸಕ್ಕರೆ ರಫ್ತು ಮಿತಿ ನಿಗದಿಪಡಿಸುವುದೂ ಕೇಂದ್ರ ಸರ್ಕಾರ. ಅವರಿಂದ ಆಗಿರುವ ಸಮಸ್ಯೆಗೆ ನಮ್ಮನ್ನು ಪರಿಹಾರ ಕೇಳಿದರೆ ಹೇಗೆ. ತೂಕದಲ್ಲಿ ಮೋಸ, ರಿಕವರಿ ಕಡಿಮೆ ತೋರಿಸುವುದು ಸೇರಿ ಸಕ್ಕರೆ ಕಾರ್ಖಾನೆಗಳ ಕುರಿತು ಕಬ್ಬು ಬೆಳೆಗಾರರ ಎಲ್ಲಾ ಅಹವಾಲುಗಳನ್ನೂ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

## ಸಿದ್ದರಾಮಯ್ಯರನ್ನು ಕೆಳಗಿಳಿಸುವುದು ಸುಲಭವಲ್ಲ ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ಮೈಸೂರು:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಸಾಧ್ಯವಿಲ್ಲ. ಸಿದ್ದರಾಮಯ್ಯ ಅವರನ್ನು ಬದಲಿಸುವುದು ಕಾಂಗ್ರೆಸ್ ಪಕ್ಷಕ್ಕೆ ಸುಲಭವಲ್ಲವೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ಸಿದ್ದರಾಮಯ್ಯ ಈ ಹಿಂದೆ ಜೆಡಿಎಸ್‌ನಲ್ಲಿದ್ದ ಕಾರಣ ಅವರ ಸಾಮರ್ಥ್ಯ ಏನೆಂದು ತಿಳಿದಿದ್ದೇವೆ. ಅದು ಇತರರಿಗೆ ತಿಳಿದಿಲ್ಲ. ನ. 20ರ ನಂತರ ಕೆಲವರು ನವೆಂಬರ್ ಕ್ರಾಂತಿಯಾಗುತ್ತದೆ ಎಂದು ಕರೆಯುತ್ತಿದ್ದು, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಊಹಾಪೋಹಗಳು ಕೇಳಿಬರುತ್ತಿವೆ. ನನಗೆ ಕ್ರಾಂತಿಯಲ್ಲಿ ನಂಬಿಕೆ ಇಲ್ಲ, ಕ್ರಾಂತಿಯ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದರು.

ನನ್ನ ಅಭಿಪ್ರಾಯದಲ್ಲಿ ಯಾವ ಕ್ರಾಂತಿಯೂ ಆಗುವುದಿಲ್ಲ. ಸಿದ್ದರಾಮಯ್ಯ ಮೊದಲು ನಮ್ಮೊಂದಿಗಿದ್ದರು, ಇತರರಿಗೆ ಅವರು ಏನೆಂದು ತಿಳಿದಿಲ್ಲ. ಅವರ ಸಾಮರ್ಥ್ಯ ಏನು ಮತ್ತು ಅವರು ಏನು ಮಾಡಲು ಸಮರ್ಥರಾಗಿದ್ದಾರೆಂದು ನಮಗೆ ತಿಳಿದಿದೆ. ಅವರನ್ನು ತೆಗೆದು ಹಾಕುವುದು ಕಾಂಗ್ರೆಸ್‌ಗೆ ಅಷ್ಟು ಸುಲಭವಲ್ಲ.



ಕಾಂಗ್ರೆಸ್‌ನಲ್ಲಿ ಏನೇನು ಚರ್ಚೆಗಳು ನಡೆದಿವೆಯೋ, ಅದಕ್ಕೂ ನಮಗೂ ಸಂಬಂಧವಿಲ್ಲವೆಂದು ಪ್ರತಿಕ್ರಿಯಿಸಿದರು.

ಡಿ.ಕೆ.ಶಿವಕುಮಾರ್ ಅವರು ಯಾವಾಗ ಮುಖ್ಯಮಂತ್ರಿಯಾಗುತ್ತೇನೆಂದು ಪ್ರತಿದಿನ ದೇವರೊಂದಿಗೆ ಚರ್ಚಿಸುತ್ತಾರೆ. ಇದು ಅವರ ಮತ್ತು ದೇವರ ನಡುವಿನ ವಿಷಯ. ರಾಜ್ಯದಲ್ಲಿ ರಾಜಕೀಯ ಕ್ರಾಂತಿಯಾದರೆ ಜೆಡಿಎಸ್ ಪಾತ್ರ ಏನಾಗಿರುತ್ತದೆ ಎಂಬ ಪ್ರಶ್ನೆಗೆ, ಕಾಂಗ್ರೆಸ್‌ನವರು ಏನು ಮಾಡುತ್ತಾರೆಂಬುದರ ಬಗ್ಗೆ ನಮಗೆ ಕಾಳಜಿ ಇಲ್ಲ. ನಾವು ನಮ್ಮ ಪಕ್ಷವನ್ನು ಸಂಘಟಿಸಲು ಮತ್ತು ರಾಜ್ಯದ ಜನರಿಗೆ ಸಂಬಂಧಿಸಿದ ಸಮಸ್ಯೆಗಳಿಗಾಗಿ ಹೋರಾಡಲು ಬಯಸುತ್ತೇವೆಂದರು.

## 1 ಕೋ.ರೂ. ವೆಚ್ಚದ ರಸ್ತೆ ಕಾಮಗಾರಿ ವೀಕ್ಷಣೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಅಣ್ಣೆಗನಹಳ್ಳಿ ಗೇಟ್‌ನಿಂದ ಶಂಕರನಹಳ್ಳಿ ಗ್ರಾಮದವರೆಗೆ 1 ಕೋ.ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ನಡೆಸಲಾಗುತ್ತಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ಶುಕ್ರವಾರ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರಸ್ತೆ ದುರಸ್ತಿಗೆ ಸ್ಥಳೀಯರಿಂದ ತುಂಬಾ ಸಮಯದಿಂದ ಬೇಡಿಕೆ ಕೇಳಿ ಬಂದಿತ್ತು. ಆದ್ದರಿಂದ ಪಿಡಬ್ಲ್ಯುಡಿ ಅನುದಾನ ಬಳಕೆ ಮಾಡಿಕೊಂಡು ಸುಮಾರು 1 ಕೋ.ರೂ. ವೆಚ್ಚದ ರಸ್ತೆ ಕಾಮಗಾರಿ ಆರಂಭಗೊಂಡಿದೆ ಎಂದು ಹೇಳಿದರು.

ಇದೇ ವೇಳೆ ಗುಣಮಟ್ಟದ ರಸ್ತೆ ಕಾಮಗಾರಿ ನಿರ್ವಹಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಹಾಗು ಗುತ್ತಿಗೆದಾರರಿಗೆ ಸೂಚಿಸಿದರು. ಸ್ಥಳೀಯ ಮುಖಂಡರು, ಪಕ್ಷದ ಕಾರ್ಯಕರ್ತರು, ಗ್ರಾಮಸ್ಥರು, ಸಾರ್ವಜನಿಕರು ಉಪಸ್ಥಿತರಿದ್ದರು.



**ಗ್ರಾಮಸ್ಥರ ಸಮಸ್ಯೆ ಆಲಿಕೆ**

ಸಾಲಗಾಮೆ ಹೋಬಳಿ ವ್ಯಾಪ್ತಿಯ ಐದಳ್ಳಕಾವಲ್ ಗ್ರಾಮದ ಬಿ ತಾಂಡ್ಯದಲ್ಲಿರುವ ಶ್ರೀ ಸೇವಾಲಾಲ್ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಶಾಸಕ ಹೆಚ್.ಪಿ.ಸ್ವರೂಪ್ ಅವರು ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲಿಯೇ ಬಗೆಹರಿಸಲಾಯಿತು. ಸೇವಾಲಾಲ್ ದೇವಸ್ಥಾನವು ದುಸ್ಥಿತಿಯಲ್ಲಿದ್ದು, ಅದನ್ನು ಪರಿಶೀಲನೆ ನಡೆಸಿ, ಶೀಘ್ರದಲ್ಲೇ ಅಗತ್ಯ ಅನುದಾನ ಉಪಯೋಗಿಸಿಕೊಂಡು ಪುನರ್ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದೆಂದು ಸ್ಥಳೀಯರಿಗೆ ಭರವಸೆ ನೀಡಿದರು. ಗ್ರಾಮಸ್ಥರು, ಮುಖಂಡರು ಇದ್ದರು.

## ಸಿ.ಟಿ.ರವಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ದೂರು

• ಪ್ರಜೋದಯ ವರದಿ

**ಹಾಸನ:** ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸುವಂತೆ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗ ಹಾಗು ಸವಿತಾ ಸಮಾಜದ ನಾಯಕರು ನಗರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಚಿಕ್ಕಮಗಳೂರು ರೂರಲ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಮೊಬೈಲ್ ಮೂಲಕ ನಡೆಸಿದ ಮಾತುಕತೆಯಲ್ಲಿ ಸಿ.ಟಿ.ರವಿ ಅವರು ಸವಿತಾ ಸಮಾಜವನ್ನು ನಿಂದಿಸುವ ಪದ ಬಳಸಿರುವ ದೃಶ್ಯ ಟಿವಿ ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದು, ಇದು ಸವಿತಾ ಸಮಾಜದ ಸದಸ್ಯರ ವೃತ್ತಿ ಮತ್ತು ಜಾತಿಗೆ ಅವಮಾನ ಎಸಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಮಂಗಳಾಪುರ ನಾಗರಾಜ್, ಪ್ರಚಾರ ಸಮಿತಿ ಅಧ್ಯಕ್ಷ ದೇವರಾಜೇಗೌಡ, ಸವಿತಾ ಸಮಾಜದ ನಗರಾಧ್ಯಕ್ಷ ಮುರುಗೇಶ್ ಮತ್ತು ಹಲವರು ಸಹಿ ಮಾಡಿರುವ ದೂರು ಪತ್ರವನ್ನು ವೃತ್ತ ನಿರೀಕ್ಷರಿಗೆ ಸಲ್ಲಿಸಲಾಯಿತು. ವಿಧಾನ ಪರಿಷತ್ ಸದಸ್ಯರ ಸ್ಥಾನದಲ್ಲಿರುವ ವ್ಯಕ್ತಿ ಅಸಂವಿಧಾನಿಕ ಪದ ಬಳಕೆ ಜನರ ಮನಗಳಿಗೆ ನೋವು ತಂದಿದ್ದು, ಕ್ರಮ ಕೈಗೊಳ್ಳಬೇಕಿದೆ ಎಂದು ಆಗ್ರಹಿಸಿದ್ದಾರೆ.

## ಗ್ರಾಮ ಸಭೆಗೆ ಅಧಿಕಾರಿಗಳ ಗೈರು : ಬಹಿಷ್ಕಾರ

### ಚಂಗಡಹಳ್ಳಿ ಗ್ರಾ.ಪಂ. ಚುನಾಯಿತ ಪ್ರತಿನಿಧಿಗಳು-ಗ್ರಾಮಸ್ಥರ ಆಕ್ರೋಶ

• ಪ್ರಜೋದಯ ವರದಿ

**ಹೆತ್ತೂರು :** ಗ್ರಾಮ ಸಭೆಗೆ ಕೇವಲ ಮೂರು ಇಲಾಖೆಯ ಅಧಿಕಾರಿಗಳು ಹಾಜರಾಗಿದ್ದು, ಸಮಸ್ಯೆ ಕೇಳುವ ಅಧಿಕಾರಿಗಳೇ ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು ಗ್ರಾಮ ಸಭೆಯನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿರುವ ಘಟನೆ ಶುಕ್ರವಾರ ಯಸಳೂರು ಹೋಬಳಿಯ ಚಂಗಡಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ.

ಗ್ರಾಮ ಪಂಚಾಯಿತಿ ಅಧ್ಯಕ್ಷ ಜಗನ್ನಾಥ್ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ಸಭೆಯ ಬಗ್ಗೆ ತಾಲ್ಲೂಕು ಆಡಳಿತದ 37 ಇಲಾಖೆಗಳಿಗೆ ಮಾಹಿತಿ ಕೊಡಲಾಗಿತ್ತು. ಆದರೆ, ಕೇವಲ ಮೂರು ಇಲಾಖೆ ಅಧಿಕಾರಿಗಳು ಹಾಜರಿರುವುದನ್ನು ಕಂಡ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಾ ಗ್ರಾಮ ಸಭೆಯನ್ನು ಬಹಿಷ್ಕರಿಸಿ ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದರು.

ಸಭೆ ಆರಂಭವಾಗುತ್ತಿದ್ದಂತೆ ಕಾಮನಹಳ್ಳಿ ಗ್ರಾಮದ ಸದಸ್ಯ ಪ್ರೀತಮ್ ಸಭೆಗೆ ಬಹುತೇಕ ಅಧಿಕಾರಿಗಳು ಹಾಜರಾಗಿಲ್ಲ. ಗ್ರಾಮಸ್ಥರ ಸಮಸ್ಯೆಯನ್ನು ಯಾರಿಗೆ ಹೇಳುವುದು, ಯಾರಿಂದ ಮಾಹಿತಿಯನ್ನು ಪಡೆದುಕೊಳ್ಳುವುದೆಂದು ಆಕ್ರೋಶ ವ್ಯಕ್ತಪಡಿಸಿದರು.



ಬಿಜೆಪಿ ಮುಖಂಡ ಸವಿನ್ ಗೌಡ ಅವರು, ಈಗಾಗಲೇ ಗ್ರಾಮ ಪಂಚಾಯಿತಿಯಲ್ಲಿ ಕೆಲವು ಹಗರಣಗಳು ಆಗಿವೆ ಎಂದು ಜನರು ಮಾತನಾಡುತ್ತಿದ್ದಾರೆ. ಇದರ ಬಗ್ಗೆ ಸೂಕ್ತ


» ನಾಲ್ಕನೇ ಪುಟದಲ್ಲಿ


# ಹೈನುಗಾರಿಕೆಯಿಂದ ರೈತರ ಆರ್ಥಿಕತೆ ಉನ್ನತಿ

### ಹಾಲು ಕರೆಯುವ ಸ್ಪರ್ಧೆ, ಪಶು ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ದೇಶದ ಬೆನ್ನೆಲುಬು ರೈತ ಎನ್ನುವುದು ಎಷ್ಟು ಸತ್ಯವೋ ಹಸುಗಳು ಸಹ ರೈತನ ಜೀವನಾಡಿ ಎಂಬುವುದನ್ನು ಮರೆಯುವಂತಿಲ್ಲ. ಪಶುಗಳು ಇಲ್ಲವಾದರೆ ಕೃಷಿಕರ ಶಕ್ತಿಯೇ ಉದುಗಿ ಹೋಗುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ಅವರ ಹೇಳಿದರು.

ತಾಲ್ಲೂಕಿನ ಕರಡಿಗಾಲ ಗ್ರಾಮದಲ್ಲಿ ಶುಕ್ರವಾರ ಏರ್ಪಡಿಸಿದ್ದ ಹಾಲು ಕರೆಯುವ ಸ್ಪರ್ಧೆ ಹಾಗು ಪಶುಗಳ ಆರೋಗ್ಯ ತಪಾಸಣಾ ಶಿಬಿರಕ್ಕೆ ಗೋಪೂಜೆ ನಡೆಸಿ ಹಸುವಿಗೆ ಬಾಳೆ ಹಣ್ಣು ತಿನ್ನಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಪಶುಗಳ ಆರೋಗ್ಯದ ಕಡೆಗೆ ವೈದ್ಯರಲ್ಲದೇ ರೈತರೂ ಗಮನ ಹರಿಸುವುದು ಒಳಿತು ಎಂದು ಸಲಹೆ ನೀಡಿದರು.

ಪಶುಗಳ ಆರೋಗ್ಯದತ್ತ ನಿರ್ಲಕ್ಷ್ಯ ವಹಿಸಿದೇ ತಪಾಸಣೆ ಮಾಡಿಸಿಕೊಂಡು ರೋಗಗಳು ತಟ್ಟದಂತೆ ಜಾಗ್ರತಿ ವಹಿಸಬೇಕು. ಇದರಿಂದ ಹೈನೋದ್ಯಮ ಬೆಳವಣಿಗೆ ಕಾಣುವುದಲ್ಲದೇ ರೈತರು ಆರ್ಥಿಕವಾಗಿ ಉನ್ನತಿ ಹೊಂದಲು ಸಾಧ್ಯವಾಗುತ್ತದೆ. ಹೈನುಗಾರಿಕೆ ಗ್ರಾಮೀಣ ಮಹಿಳೆಯರ ಸ್ವಾವಲಂಬಿ ಬದುಕು ಕಟ್ಟಿ ಕೊಡುವುದಲ್ಲದೆ ಆರ್ಥಿಕ ಮನ್ನುಡಿಗೆ ಸಹಕಾರಿಯಾಗಿದೆ. ರೈತರು ಮುಖ್ಯವಾಗಿ ಜಾನುವಾರು ಖರೀದಿಯಲ್ಲಿ ಮೋಸ ಹೋಗದಂತೆ ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು.

ಹಾಲು ಉತ್ಪಾದನೆಯೇ ಮುಖ್ಯ ಗುರಿಯಾಗದೆ ಗುಣಮಟ್ಟದ ಜಾನುವಾರು ಖರೀದಿಗೆ ಮುಂದಾಗ ಬೇಕು. ರೈತ ಎಂದು ಕೂಡ ಮೋಸ ಮಾಡುವುದಿಲ್ಲ. ಆದರೆ, ರೈತನಿಗೆ ಮೋಸ ಮಾಡಲೆಂದೇ ಕೆಲವು ನಕಲಿ ಕಂಪನಿಗಳು ಹುಟ್ಟಿಕೊಂಡಿವೆ. ಇದರ ಬಗ್ಗೆ ರೈತರು ಎಚ್ಚರದಲ್ಲಿರಬೇಕೆಂದರು.



ಸಹಾಯಕ ನಿರ್ದೇಶಕ ವೆಂಕಟೇಶ್ ಅವರು ಮಾತನಾಡಿ, ಜಾನುವಾರುಗಳಿಗೆ ಕಾಲಕಾಲಕ್ಕೆ ತಕ್ಕಂತೆ ಲಸಿಕೆಗಳನ್ನು ಕೊಡಿಸಬೇಕೆಂದು ರೈತರಿಗೆ ಇಲಾಖೆಯಿಂದ ದೊರಕುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಹಾಲು ಕರೆಯುವ ಸ್ಪರ್ಧೆಯಲ್ಲಿ ಶೋಭಾ 16.14 ಕೆಜಿ, ಸಾಗರಿಕ 15.82 ಕೆಜಿ, ಮಣಿ 11.26 ಕೆಜಿ, ಕಮಲಮ್ಮ 10.92 ಕೆಜಿ ಹಾಲು ಕರೆಯುವ ಮೂಲಕ ಬಹುಮಾನ ಗಳಿಸಿದರು. ಕರಡಿಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷೆ ಭಾಗ್ಯಲಕ್ಷ್ಮಿ, ಸಂಘದ ಕಾರ್ಯದರ್ಶಿ ಶಿವಣ್ಣ, ಗ್ರಾಮ ಪಂಚಾಯಿತಿ ಸದಸ್ಯರಾದ ಆನಂದ್, ಸುದರ್ಶನ್, ಮುಖಂಡರಾದ ಕೃಷ್ಣೇಗೌಡ, ಹರೀಶ್ ಗ್ರಾಮಸ್ಥರಿದ್ದರು.

## ಇಂದು ಮಹಿಳೆಯರ ಆರೋಗ್ಯ ತಪಾಸಣಾ ಶಿಬಿರ

• ಪ್ರಜೋದಯ ವರದಿ

**ಹಾಸನ:** ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು ಹಾಗೂ ಮಹಿಳೆಯರ ಆರೋಗ್ಯ ತಪಾಸಣೆಗಾಗಿ ನ.8 ರಂದು ಬೆಳಿಗ್ಗೆ 10 ರಿಂದ ಸಂಜೆ 4 ವರೆಗೆ ನಗರದ ಹೊಸಲೈನ್ ರಸ್ತೆಯ ಪುಷ್ಪಗಿರಿ ಆರೋಗ್ಯ ವಿಜ್ಞಾನ ಸಂಸ್ಥೆಯಲ್ಲಿ ವಿಶೇಷ ಶಿಬಿರ ಏರ್ಪಡಿಸಲಾಗಿದೆ.

ಪುಷ್ಪಗಿರಿ ಸಂಸ್ಥಾನದ ಮಠಾಧೀಶ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಹಾಸನ ತಾಲ್ಲೂಕು ಅಖಿಲ ಭಾರತ ವೀರಶೈವ-ಲಿಂಗಾಯಿತ ಮಹಾಸಭಾದ ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಅಧ್ಯಕ್ಷತೆ ವಹಿಸುವರು. ಮಮತಾ ಪಾಟೀಲ್ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ||ರಂಗಲಕ್ಷ್ಮಿ, ಡಾ||ಸೌಮ್ಯ ಮಣಿ, ನವಿಲೆ ಪರಮೇಶ್, ಹೆಚ್. ಸಿದ್ದೇಶ್ವರ, ಡಾ. ತೇಜಸ್ವಿ, ಚಂದ್ರಮತಿ ಮತ್ತು ಧನಲಕ್ಷ್ಮಿ ಭಾಗವಹಿಸಲಿದ್ದಾರೆ. ಮಹಿಳೆಯರಿಗಾಗಿ ಸಾಮಾನ್ಯ ರೋಗ ತಪಾಸಣೆ, ಸ್ತ್ರೀರೋಗ, ಪ್ರಸೂತಿ ಮತ್ತು ಕ್ಯಾನ್ಸರ್ ತಜ್ಞರಿಂದ ಸ್ತನ ಹಾಗೂ ಗರ್ಭಕಂಠ ಕ್ಯಾನ್ಸರ್ ತಪಾಸಣೆ, ರಕ್ತದೊತ್ತಡ, ಸಕ್ಕರೆ ಮತ್ತು ಇತರ ಕಾಯಿಲೆಗಳ ಪರೀಕ್ಷೆ ನಡೆಯಲಿದೆ. ಮಹಿಳೆಯರು ಈ ಶಿಬಿರದ ಪ್ರಯೋಜನ ಪಡೆದು ಕೊಳ್ಳಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

## ದಾಖಲೆ ಇಲ್ಲದ 34 ಲ.ರೂ. ಐಟಿಗೆ ಹಸ್ತಾಂತರ



• ಪ್ರಜೋದಯ ವರದಿ

**ಬೇಲೂರು:** ಪಟ್ಟಣ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 34 ಲಕ್ಷ ರೂ.ಗಳನ್ನು ಶುಕ್ರವಾರ ಮೈಸೂರು ವಿಭಾಗದ ಆದಾಯ ತೆರಿಗೆ ಇಲಾಖೆ ನಿರ್ದೇಶಕ ವೆಂಕಟೇಶನ್ ನೇತೃತ್ವದ ತಂಡಕ್ಕೆ ಹಸ್ತಾಂತರಿಸಲಾಯಿತು.

ವಾಸಿಮ್ ಎಂಬುವವರಿಗೆ ಸೇರಿದ್ದು ಎನ್ನಲಾದ ಹಣವನ್ನು ಅಕ್ಟೋಬರ್‌ನಲ್ಲಿ ವಾಹನದಲ್ಲಿ ಸಾಗಿಸುತ್ತಿತ್ತು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಇನ್ಸಪೆಕ್ಟರ್ ರೇವಣ್ಣ ನೇತೃತ್ವದ ತಂಡ ವಶಕ್ಕೆ ಪಡೆದು ಸೂಕ್ತ ದಾಖಲೆ ಸಲ್ಲಿಸುವಂತೆ ತಿಳಿಸಿದ್ದರು. ಸಂಬಂಧಪಟ್ಟವರಿಂದ ಸೂಕ್ತ ಮಾಹಿತಿ ನೀಡದ ಹಿನ್ನಲೆಯಲ್ಲಿ ಹಾಸನದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದು ಹಣವನ್ನು ತಮ್ಮ ಸುಪರ್ದಿಯಲ್ಲಿಟ್ಟುಕೊಂಡಿದ್ದರು.

ತಿಂಗಳು ಕಳೆದರೂ ವಾಸಿಮ್ ದಾಖಲೆಗಳನ್ನು ಆದಾಯ ತೆರಿಗೆ ಇಲಾಖೆ ಅಥವಾ ಪೊಲೀಸ್ ಇಲಾಖೆಗೆ ನೀಡದ ಹಿನ್ನಲೆಯಲ್ಲಿ ಕಾನೂನು ಪ್ರಕಾರ ಮಹಜರು ಮೂಲಕ ಸಾಕ್ಷಿದಾರರ ಸಮ್ಮುಖದಲ್ಲಿ ಹಸ್ತಾಂತರಿಸಲಾಯಿತು.

**ಸ್ವಂತ ಖರ್ಚಿನಲ್ಲಿ ಪೈಪ್‌ಲೈನ್ ಅಳವಡಿಕೆ | ಅಂತರ್ಜಲ ಮಟ್ಟ ವೃದ್ಧಿ | ಬರದ ನಾಡಿನಲ್ಲಿ ನೀರು**

# ಎತ್ತಿನಹೊಳೆ ಯೋಜನೆ ನೀರನ್ನು ಕೆರೆಗೆ ತಂದ ಅನ್ನದಾತರು

• ಪ್ರಜೋದಯ ವರದಿ

**ಹಾಸನ:** ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಎತ್ತಿನಹೊಳೆ ಯೋಜನೆ ನೀರು ಅರಸೀಕೆರೆ ಹಾಗು ಬೇಲೂರು ತಾಲ್ಲೂಕಿನ ಕೆರೆಗಳಿಗೆ ವರದಾನವಾಗಿದ್ದು, ರೈತರು ಪೈಪ್‌ಲೈನ್ ಅಳವಡಿಸಿ ಕೆರೆಗಳ ಭರ್ತಿ ಮಾಡಿಕೊಳ್ಳುವ ಮೂಲಕ ಬಯಲು ಸೀಮೆ ಹಣೆ ಪಟ್ಟಿಯಿಂದ ದೂರವಾಗಲು ಪ್ರಯತ್ನಿಸುತ್ತಿದ್ದಾರೆ.

ಹಳೇಬೀಡು, ಜಾವಗಲ್ ಹೋಬಳಿಯ ನೂರಾರು ಕೆರೆಗಳು ಎತ್ತಿನಹೊಳೆ ಯೋಜನೆಯಿಂದ ಸಂಪದ್ಭರಿತವಾಗಿವೆ. ಬಯಲು ಸೀಮೆ ಪ್ರದೇಶಕ್ಕೆ ನೀರು ಒದಗಿಸುವ ಮಹತ್ವದ ಯೋಜನೆಯೇ ಎತ್ತಿನಹೊಳೆಯಾದರೂ ದಶಕಗಳಿಂದ ಕೆರೆ ತುಂಬಿಸುವ ಕೆಲಸ ಆಗಿಲ್ಲ. ಅದನ್ನು ಅರಿತ ರೈತರೇ ಮುಂದಾಳತ್ವ ವಹಿಸಿ ಪೈಪ್‌ಲೈನ್ ಮೂಲಕ ನೀರು ಹರಿಸಿದ್ದಾರೆ. ನಿಡಘಟ್ಟ, ಸಿಂದಿಗೆರೆ, ಎಸ್.ಬಿದರೆ ಹೀಗೆ ಸುತ್ತಲಿನ ಅನೇಕ ಕೆರೆಗಳಿಗೆ ಎತ್ತಿನಹೊಳೆ ನೀರು ತಲುಪಿದೆ. ಅದರಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿರುವುದು ಮಾತ್ರವಲ್ಲದೆ ಉತ್ತಮ ಬೆಳೆಗಳನ್ನು ರೈತರು ಪಡೆಯುವಂತಾಗಿದೆ.



**ರೈತರೇ ಚಂದಾ ಎತ್ತಿದ ಹಣದಿಂದ ಪೈಪ್‌ಲೈನ್**

ಹಳೇಬೀಡು, ಜಾವಗಲ್ ಹೋಬಳಿಯಲ್ಲಿ ನೀರಿಗೆ ಹಾಹಾಕಾರವಿದೆ. ಮಳೆಯಾಶ್ರಿತ ಬೆಳೆಯನ್ನೇ ಭಾಗದ ರೈತರು ಕೈಗೊಂಡಿದ್ದಾರೆ. 1,500 ಅಡಿ ಆಳ ಬೋರ್‌ವೆಲ್ ಕೊರೆದರೂ ನೀರು ದೊರೆಯದ ಪರಿಸ್ಥಿತಿ ಇಲ್ಲಿದೆ. ಅರಸೀಕೆರೆ, ಕಡೂರು ಭಾಗದಲ್ಲಿ ನೀರಿಗೆ ಹಾಹಾಕಾರ ಇದೆ. ಹೀಗಾಗಿ ಅಲ್ಲಿನ ರೈತರು ಉತ್ತಮ ಇಳುವರಿ ಪಡೆಯುವುದು ವಿರಳ ಎನ್ನುವಂತಾಗಿದೆ. ಆದರೆ, ಎತ್ತಿನಹೊಳೆ ಯೋಜನೆ ಅವರಿಗೆ ಅನುಕೂಲ ಕಲ್ಪಿಸಿದೆ ಎನ್ನ ಬಹುದು. ಸಕಲೇಶಪುರದ ಪಶ್ಚಿಮಘಟ್ಟದ ಆರಂಭವಾಗುವ ಎತ್ತಿನಹೊಳೆ ಯೋಜನೆ ನೀರು ಪೈಪ್‌ಲೈನ್ ಮೂಲಕ ಹಳೇಬೀಡು ಹೋಬಳಿ ಬೆಳವಾಡಿ ಕೆರೆ ತಲುಪುತ್ತಿದೆ. ಅಲ್ಲಿಂದ ಮಾಚೇನಹಳ್ಳಿ ಕೆರೆ ಸೇರುತ್ತದೆ. ನಂತರ ಗುರುತ್ವಾಕರ್ಷಣೆ ಮೂಲಕ ಇಳಿಜಾರಿನಲ್ಲಿ ಹಾದು ನೀರು ವೇದಾ ನದಿಗೆ ಸೇರುವ ನೀರನ್ನು ಕೆರೆಗಳ ಹರಿಸಿ ಕೃಷಿಗೆ ಬಳಸಿ ಕೊಳ್ಳ ಲಾಗುತ್ತಿದೆ. ಮೊದಲು ನಿಡಘಟ್ಟ ಗ್ರಾಮದ ರೈತರು ಈ ಕಾಮಗಾರಿಗೆ ಮುನ್ನುಡಿ ಬರೆದರು. ನಂತರ ಅದು ಸುತ್ತಲಿನ ಹಳ್ಳಿಗಳಿಗೂ ವಿಸ್ತರಣೆಯಾಗಿದೆ. ಸುಮಾರು ಒಂದೂವರೆ ಕಿ.ಮೀ. ದೂರದ ವರೆಗೆ ಪೈಪ್‌ಲೈನ್ ಅಳವಡಿಸಲು ರೈತರೇ ಹಣ ಸಂಗ್ರಹಿಸಿದ್ದಾರೆ. ಕೆರೆಗಳು ಭರ್ತಿಯಾದರೆ ಸಾಕೆಂಬ ಉದ್ದೇಶದಿಂದ ಕೃಷಿಕರು, ಜಮೀನು ಇಲ್ಲದೆ ಇರುವವರು, ಉದ್ಯೋಗ ಅರಿಸಿ ಬೇರೆ ಬೇರೆ ನಗರಗಳಲ್ಲಿ ವಾಸಿಸುವವರು ಸಹ ಶಕ್ತ್ಯಾನುಸಾರ ಆರ್ಥಿಕ ಸಹಾಯ ಮಾಡುವ ಮೂಲಕ ಗ್ರಾಮಕ್ಕೆ ನೀರು ತಂದಿದ್ದಾರೆ.

> **ಎತ್ತಿನಹೊಳೆ ಯೋಜನೆ ಬಯಲು ಸೀಮೆ ಭಾಗಕ್ಕೆ ವರದಾನವಾಗಿದೆ. ಗುರುತ್ವಾಕರ್ಷಣೆ ಮೂಲಕ ಹರಿಯುತ್ತಿದ್ದ ನೀರನ್ನು ಪೈಪ್‌ಲೈನ್ ಮೂಲಕ ಕೆರೆ ಭರ್ತಿಗೆ ಬಳಸಿಕೊಳ್ಳಲಾಗುತ್ತಿದೆ. ಅದರಿಂದ ಅನೇಕ ಕೆರೆಗಳು ಭರ್ತಿಯಾಗಿದ್ದು, ಅಂತರ್ಜಲ ಮಟ್ಟ ವೃದ್ಧಿಯಾಗಿದೆ.**
> **-ವಿನಾಯಕ, ಸಿಂದಿಗೆರೆ ರೈತ**

**ಬೆಳೆಗೆ ವರವಾದ ನೀರು**

ಪೈಪ್‌ಲೈನ್ ಮೂಲಕ ಕೆರೆಗಳನ್ನು ತುಂಬಿಸಿದ ಎತ್ತಿನಹೊಳೆ ನೀರು ಬೆಳೆಗೆ ಅನುಕೂಲ ಕಲ್ಪಿಸಿದೆ. ಏಕ ಬೆಳೆ ಅವಲಂಬಿಸಿದ್ದ ಬಯಲು ಸೀಮೆ ರೈತರೀಗ ಬಹು ಬೆಳೆಯತ್ತ ಗಮನ ಹರಿಸಿದ್ದಾರೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೂ ಪರದಾಡುವ ಚಿಂತಾಜನಕ ಸ್ಥಿತಿ ಕೆಲವು ಗ್ರಾಮಗಳಲ್ಲಿದೆ. ಈಗ ಆ ಗ್ರಾಮಗಳಲ್ಲಿ ಬವಣೆ ದೂರಾಗುವ ಭರವಸೆ ಮೂಡಿದೆ.

**ಸರ್ಕಾರದಿಂದ ಸಿಗಲಿ ಪ್ರೋತ್ಸಾಹ**

ನೀರಿನ ತೀವ್ರ ಅಭಾವದಿಂದ ಬೆಳೆಗಳು ಒಣಗುತ್ತಿದ್ದಾಗ, ರೈತರು ಸರ್ಕಾರದ ನಿರೀಕ್ಷೆಯಲ್ಲಿ ಕಾಲಹರಣ ಮಾಡದೇ ಸಹಕಾರದ ಮನೋಭಾವದಿಂದ ನೀರನ್ನು ಹತ್ತಿರದ ಪೈಪ್ ಸಂಪರ್ಕದಿಂದ ತಮ್ಮ ಹೊಲಗಳಿಗೆ ತಲುಪಿಸುತ್ತಿದ್ದಾರೆ. ಮಾಜಿ ಸಂಸದ ಸಿದ್ದು ನ್ಯಾಮನಗೌಡ ಅವರು ಕೃಷ್ಣಾ ನದಿಗೆ ಬ್ಯಾರೇಜ್ ನಿರ್ಮಿಸಿ ಸಾವಿರಾರು ಎಕರೆ ಭೂಮಿಗೆ ನೀರೊದಗಿಸಿದ್ದರು. ಅದೇ ಮಾದರಿಯಲ್ಲಿ ಜಿಲ್ಲೆಯ ರೈತರು ಮುಂದಡಿ ಇಟ್ಟಿದ್ದಾರೆ.

## ಜೆಜೆಎಂ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಸಕಲೇಶಪುರ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಜಲ ಜೀವನ್ ಮಿಷನ್ ಯೋಜನೆಯಡಿ ತಾಲ್ಲೂಕಿನ ಮೂರು ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ 1.24 ಕೋ.ರೂ. ವೆಚ್ಚದ ಕಾಮಗಾರಿಗೆ ಶುಕ್ರವಾರ ಶಾಸಕ ಸಿಮೆಂಟ್ ಮಂಜು ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ತಾಲ್ಲೂಕಿನ ಹೆತ್ತೂರು ಹೋಬಳಿ ವ್ಯಾಪ್ತಿಯ ಹಳ್ಳಿಬೈಲು ಗ್ರಾಮದಲ್ಲಿ 45 ಲ.ರೂ. ವೆಚ್ಚದಲ್ಲಿ 30 ಮನೆ, ವಣಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಬೈಲು ಗ್ರಾಮದಲ್ಲಿ 35 ಲಕ್ಷ ರೂ. ವೆಚ್ಚದಲ್ಲಿ 20 ಮನೆಗಳಿಗೆ ಪೈಪ್ ಲೈನ್ ಹಾಗು ನೀರಿನ ಟ್ಯಾಂಕ್ ನಿರ್ಮಾಣ ಮತ್ತು ತಂಬೈಲು ಗ್ರಾಮದಲ್ಲಿ 44 ಲಕ್ಷ ರೂ. ವೆಚ್ಚದಲ್ಲಿ 27 ಮನೆಗಳಿಗೆ ಶುದ್ಧ ನೀರು ಪೂರೈಸಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಜಲ ಜೀವನ್ ಮಿಷನ್ ಯೋಜನೆ ಮೂಲಕ ಗ್ರಾಮೀಣ ಪ್ರದೇಶದ ಪ್ರತಿ ಮನೆ ಮನೆಗೆ ನಲ್ಲಿ ಸಂಪರ್ಕದ


» ನಾಲ್ಕನೇ ಪುಟದಲ್ಲಿ

## ಬಿಹಾರದಲ್ಲಿ ದಾಖಲೆ ಮತದಾನ ಮೋದಿ-ನಿತೀಶ್ ಮೇಲಿನ ನಂಬಿಕೆಗೆ ಸಾಕ್ಷಿ

• ಪ್ರಜೋದಯ ವರದಿ

**ಔರಂಗಾಬಾದ್:** ಬಿಹಾರ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ದಾಖಲೆಯ ಮತದಾನವಾಗಿರುವುದು ಜನ ನರೇಂದ್ರ ಮೋದಿ ಮತ್ತು ನಿತೀಶ್ ಕುಮಾರ್ ಅವರ ಟ್ರ್ಯಾಕ್ ರೆಕಾರ್ಡ್ ಮೇಲೆ ನಂಬಿಕೆ ಇಟ್ಟಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದ್ದಾರೆ.

ಇಂದು ಬಿಹಾರದ ಕೈಮೂರ್ ಜಿಲ್ಲೆಯ ಔರಂಗಾಬಾದ್ ಮತ್ತು ಭಭುವಾದಲ್ಲಿ ಸತತ ಎರಡು ಚುನಾವಣಾ ರ್ಯಾಲಿಗಳನ್ನುದ್ದೇಶಿಸಿ ಮಾತನಾಡಿದ ಮೋದಿ, ಜೆಡಿ(ಯು) ಅಧ್ಯಕ್ಷ, ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಗೆಲುವು ಸಾಧಿಸಲಿದೆ ಎಂದು ಭವಿಷ್ಯ ನುಡಿದರು.

ಮೊದಲ ಹಂತದಲ್ಲಿ 121 ಕ್ಷೇತ್ರಗಳಲ್ಲಿ ಮತದಾನವನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಚುನಾವಣಾ ಆಯೋಗವನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ನಾನು ಭರವಸೆ ನೀಡಿದ್ದನ್ನು ಮಾಡುತ್ತೇನೆ ಎಂಬುದಕ್ಕೆ ರಾಮ ಮಂದಿರ ನಿರ್ಮಾಣ, 370ನೇ ವಿಧಿ ರದ್ದು ಮತ್ತು ಆಪರೇಷನ್ ಸಿಂಧೂರ್ ಉದಾಹರಣೆಯಾಗಿ ನೀಡಿದರು.

ಗುರುವಾರ ಬಿಹಾರದ ಮತದಾರರು ಎಲ್ಲಾ ದಾಖಲೆಗಳನ್ನು ಮುರಿದ ಅತಿ ಹೆಚ್ಚು ಮತದಾನ ಮಾಡಿದ್ದಾರೆ. ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಇಷ್ಟೊಂದು ಮತದಾನದ ಆಗಿಲ್ಲ. ಇದರ ಹೆಚ್ಚಿನ ಶ್ರೇಯಸ್ಸು ತಾಯಂದಿರು ಮತ್ತು ಸಹೋದರಿಯರಿಗೆ ಸಲ್ಲುತ್ತದೆ, ಅವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನವನ್ನು ಶೇ.65ಕ್ಕೆ ಏರಿಸಿದರು. ಅವರೆಲ್ಲರೂ ನರೇಂದ್ರ-ನಿತೀಶ್ ಅವರ ಸಾಧನೆಯ ಮೇಲೆ ನಂಬಿಕೆ ಇಟ್ಟಿದ್ದಾರೆಂಬುದು ಅದರಿಂದ ಸ್ಪಷ್ಟವಾಗಿದೆ ಎಂದು ಮೋದಿ ಹೇಳಿದರು.

ಬಿಹಾರದಲ್ಲಿ ಉತ್ತಮ ಆಡಳಿತ ಖಾತರಿಪಡಿಸುವ ಎನ್‌ಡಿಎ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬೇಕು ಎಂದು ಜನ ಮತ ಚಲಾಯಿಸಿದ್ದಾರೆ ಎಂದು ಪ್ರಧಾನಿ ಹೇಳಿದರು.

## ಬಿಹಾರದ ಅಭಿವೃದ್ಧಿ ಬಗ್ಗೆ ಲಾಲು-ರಾಹುಲ್‌ಗೆ ಕಾರ್ಯಸೂಚಿ ಇಲ್ಲ

• ಪ್ರಜೋದಯ ವರದಿ

**ಪಟ್ನಾ:** ವಿರೋಧ ಪಕ್ಷದ ನಾಯಕರಿಗೆ ಬಿಹಾರದ ಅಭಿವೃದ್ಧಿ ಬಗ್ಗೆ ಯಾವುದೇ ಕಾರ್ಯಸೂಚಿ ಇಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಆರೋಪಿಸಿದ್ದಾರೆ.



ಲಾಲೂ ಪ್ರಸಾದ್ ಹಾಗೂ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿರುವ ಅಮಿತ್ ಶಾ, ಆರ್‌ಜೆಡಿ-ಕಾಂಗ್ರೆಸ್ ಮೈತ್ರಿಯು ರಾಜ್ಯದಲ್ಲಿ ನುಸುಳುಕೋರರನ್ನು ಬೆಂಬಲಿಸುವುದನ್ನು ಬಿಟ್ಟರೆ ಬಡಜನರಿಗಾಗಿ ಬೇರೆ ಏನನ್ನೂ ಮಾಡಿಲ್ಲ ಎಂದು ಟೀಕಿಸಿದ್ದಾರೆ.

ಚುನಾವಣಾ ಸಮಾವೇಶ ಉದ್ದೇಶಿಸಿ ಮಾತನಾಡಿದ ಅಮಿತ್ ಶಾ, ಸೋನಿಯಾ ಗಾಂಧಿ ವಿರುದ್ಧವೂ ವಾಗ್ದಾಳಿ ನಡೆಸಿದ್ದಾರೆ. ಲಾಲೂ ಹಾಗೂ ಸೋನಿಯಾ ತಮ್ಮ ಪುತ್ರರ ಬಗ್ಗೆ ಮಾತ್ರ ಕಾಳಜಿ ಹೊಂದಿದ್ದಾರೆ. ಬಿಹಾರದ ಅಭಿವೃದ್ಧಿ ಬಗ್ಗೆ ಯೋಚನೆ ಮಾಡಿಲ್ಲ ಎಂದು ಆರೋಪಿಸಿದ್ದಾರೆ.

ಎನ್‌ಡಿಎಗೆ ಇನ್ನೂ ಐದು ವರ್ಷಗಳವರೆಗೆ ಜನಾದೇಶ ನೀಡಿ. ಬಿಹಾರವನ್ನು ಅಭಿವೃದ್ಧಿ ಹೊಂದಿದ ರಾಜ್ಯಗಳ ಪಟ್ಟಿಗೆ ಸೇರ್ಪಡೆಗೊಳಿಸಲಾಗುವುದು. ರಾಜ್ಯವನ್ನು ಪ್ರವಾಹ ಮುಕ್ತ ಗೊಳಿಸಲಿದ್ದೇವೆ ಎಂದು ಭರವಸೆ ನೀಡಿದ್ದಾರೆ.

## ಮಹಾರಾಷ್ಟ್ರ ಸರ್ಕಾರದಿಂದ ಜೆಮಿಮಾ, ಮಂದಾನ, ರಾಧಾಗೆ 2.5 ಕೋಟಿ

• ಪ್ರಜೋದಯ ವರದಿ

**ಮುಂಬೈ:** ಐಸಿಸಿ ಏಕದಿನ ವಿಶ್ವಕಪ್ ಗೆದ್ದುಕೊಂಡ ಭಾರತ ತಂಡದಲ್ಲಿರುವ ಮಹಾರಾಷ್ಟ್ರದ ಆಟಗಾರ್ತಿಯರಾದ ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗಸ್ ಮತ್ತು ರಾಧಾ ಯಾದವ್ ಅವರನ್ನು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶುಕ್ರವಾರ ನಡೆದ ಸಮಾರಂಭ ದಲ್ಲಿ ಸನ್ಮಾನಿಸಿದರು. ಮೂವರಿಗೂ ತಲಾ 2.5 ಕೋಟಿ ನಗದು ಬಹುಮಾನ ನೀಡಲಾಯಿತು.

ಮುಖ್ಯಮಂತ್ರಿ ಅಧಿಕೃತ ನಿವಾಸ ವರ್ಷಾದಲ್ಲಿ ಕಾರ್ಯಕ್ರಮ ನಡೆಯಿತು. ಈ ಮೂವರು ಆಟಗಾರ್ತಿಯರನ್ನು ಮಹಾರಾಷ್ಟ್ರದ ಹೆಮ್ಮೆ ಎಂದು ಮುಖ್ಯಮಂತ್ರಿ ಬಣ್ಣಿಸಿದರು. ಮುಂಬೈ ನಲ್ಲಿ ನಡೆದ ಫೈನಲ್ ನಲ್ಲಿ ಭಾರತ ತಂಡವು 52 ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿ ವಿಶ್ವ ಚಾಂಪಿಯನ್ ಆಗಿತ್ತು.

ತಂಡದ ಕೋಚ್ ಅಮೋಲ್ ಮಜುಂದಾರ್ ಅವರಿಗೆ 22.5 ಲಕ್ಷ ಮೊತ್ತದ ಚೆಕ್ ನೀಡಿ ಗೌರವಿಸಲಾಯಿತು. ಬೌಲಿಂಗ್ ಕೋಚ್ ಅವಿಷ್ಕಾರ್ ಸಾಳ್ವಿ, ಮಾಜಿ ದಿಗ್ಗಜ ಆಟಗಾರ್ತಿ ಡಯಾನ ಎಡುಲ್ಜಿ, ವಿಡಿಯೊ ಅನಲಿಸ್ಟ್ ಅನಿರುದ್ಧ ದೇಶಪಾಂಡೆ ಅವರಿಗೂ ನಗದು ಬಹುಮಾನ ನೀಡಲಾಯಿತು.

ಮಹಿಳಾ ವಿಶ್ವಕಪ್ ತಂಡದಲ್ಲಿದ್ದ ಸ್ಪಿನ್ ಬೌಲರ್ ಶ್ರೀಚರಣಿ ಅವರಿಗೆ ಆಂಧ್ರ ಸರ್ಕಾರವು ಶುಕ್ರವಾರ 2.5 ಕೋಟಿ ನಗದು



ಬಹುಮಾನ ಘೋಷಿಸಿದೆ. ವಸತಿ ನಿವೇಶನ ಮತ್ತು ಗ್ರೂಪ್1 ಸರ್ಕಾರಿ ಉದ್ಯೋಗ ನೀಡುವುದಾಗಿಯೂ ಪ್ರಕಟಿಸಿದೆ. ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಅಮರಾವತಿಯಲ್ಲಿ ಶ್ರೀ ಚರಣೀ ಮತ್ತು ಭಾರತ ತಂಡದ ಮಾಜಿ ನಾಯಕಿ ಮಿತಾಲಿ ರಾಜ್ ಅವರನ್ನು ಭೇಟಿಯಾದ ವೇಳೆ ಈ ಕೊಡುಗೆ ಪ್ರಕಟಿಸಿದರು.

## ಗ್ರಾಮ ಸಭೆಗೆ ಅಧಿಕಾರಿಗಳ ಗೈರು: ಬಹಿಷ್ಕಾರ

» ಮೊದಲನೇ ಪುಟದಿಂದ

ತನಿಖೆ ನಡೆಯಬೇಕು. ಹೆಚ್ಚಿನ ಸಂಖ್ಯೆಯ ಇಲಾಖೆಯವರು ಸಭೆಗೆ ಹಾಜರಾಗಬೇಕು. ಅವರಿಂದ ರೈತರಿಗೆ ಇಲಾಖೆಯಿಂದ ಸಿಗುವ ಸವಲತ್ತುಗಳ ಬಗ್ಗೆ ಸೂಕ್ತವಾದ ಮಾಹಿತಿ ಸಿಗಬೇಕು.ಹಾಗಾಗಿ ಸಂಬಂಧ ಪಟ್ಟ ಅಧಿಕಾರಿಗಳು ಬರಬೇಕು, ಇಲ್ಲವಾದರೆ ಗ್ರಾಮ ಸಭೆಯನ್ನು ನಡೆಸಲು ಬಿಡುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತಿಯ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಂಬಂಧ ಪಟ್ಟಂತೆ ಕಾಮಗಾರಿಯು ನಡೆದಿದ್ದರೂ ಕೂಡ ಗ್ರಾಮಸ್ಥರಿಗೆ ಕುಡಿಯುವ ನೀರಿನ ಭಾಗ್ಯ ಸಿಕ್ಕಿಲ್ಲ. ಇದರಿಂದ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕು, ಹಕ್ಕು ಪತ್ರಗಳನ್ನು ಇದುವರೆಗೂ ಗ್ರಾಮ ಪಂಚಾಯಿತಿ ಫಲಾನುಭವಿಗಳಿಗೆ ನೀಡಲು ಕಂದಾಯ ಇಲಾಖೆಯವರು ಮನಸ್ಸು ಮಾಡಿಲ್ಲ, ಸರಿಯಾದ ರೀತಿಯಲ್ಲಿ ಜೆಜೆಎಂ ಕಾಮಗಾರಿ ನಡೆದಿಲ್ಲವೆಂದು ಗ್ರಾಮಸ್ಥರು ಪಟ್ಟು ಹಿಡಿದರು. ಸಭೆಯಲ್ಲಿ ನೆರೆದಿದ್ದ ಎಲ್ಲಾ ಗ್ರಾಮಸ್ಥರು



ಒಗ್ಗಟ್ಟಿನಿಂದ ಸಭೆಯನ್ನು ಬಹಿಷ್ಕರಿಸಿ ಸಭೆಯಿಂದ ಹೊರ ನಡೆದರು. ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು ಹಾಗೂ ಹೆಚ್ಚಿನ ಸಂಖ್ಯೆಯ ಗ್ರಾಮಸ್ಥರು ನೆರೆದಿದ್ದರು.

## ಜೆಜೆಎಂ ಕಾಮಗಾರಿಗೆ ಚಾಲನೆ

» ಮೊದಲನೇ ಪುಟದಿಂದ

ಮೂಲಕ ಶುದ್ಧ ಕುಡಿಯುವ ನೀರು ನೀಡಲಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಬೇಕು. ಗ್ರಾಮೀಣ ಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆಯಿಂದ ಕಾಯಿಲೆಗಳಿಗೆ, ದೈಹಿಕ ಸಮಸ್ಯೆಗಳಿಗೆ ತುತ್ತಾಗುತ್ತಿದ್ದರು. ಸರ್ಕಾರ ಸಾಕಷ್ಟು ಕಡೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾಡಿದರೂ ಸಹ ಇನ್ನು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದನ್ನು ನೋಡುತ್ತಿದ್ದೇವೆ. ಅದಕ್ಕಾಗಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಗ್ರಾಮೀಣ ಭಾಗದ ಪ್ರತಿ ಮನೆಗೆ ನಲ್ಲಿ ಮೂಲಕ ನೀರು ಸರಬರಾಜು ಮಾಡುವ ಮೂಲಕ ಪ್ರತಿಯೊಬ್ಬರ ಆರೋಗ್ಯ ಕಾಪಾಡುವ ಕೆಲಸ ಮಾಡುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದರು.

ಇದೇ ವೇಳೆ ಗುತ್ತಿಗೆದಾರರು ಕಾಮಗಾರಿ ನಡೆಸುವ ವೇಳೆ ಅನಾವಶ್ಯಕವಾಗಿ ರಸ್ತೆಯನ್ನು ಬಾರದು. ತ್ವರಿತವಾಗಿ ಗುಣಮಟ್ಟದಿಂದ ಕೂಡಿದ ಕಾಮಗಾರಿ ನಡೆಸುವಂತೆ ಸೂಚನೆ ನೀಡಿದರು. ಹೆತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗರಾಜ್, ವಣಗೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪುಷ್ಪ, ಉಪಾಧ್ಯಕ್ಷರು ನಾರಾಯಣ್, ಸದಸ್ಯರಾದ ಡಿಲಾಕ್ಷ, ಮಾಲಿನಿ, ಸುಬ್ರಮಣ್ಯ, ರಂಜಿತ, ಗ್ರಾಮದ ಮುಖಂಡರಾದ ಅಪ್ಪಸ್ವಾಮಿ ಗೌಡ, ಬಾಲಕೃಷ್ಣ, ಉಮೇಶ್, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಸಂಜಯ್ ಮತ್ತಿತರರು ಹಾಜರಿದ್ದರು.

## ಗಾಂಜಾ ಮಾರಾಟ: ಅಸ್ಸಾಂ ಕಾರ್ಮಿಕರ ಬಂಧನ



• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಎಪಿಎಂಸಿ ಬಳಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಅಸ್ಸಾಂ ಮೂಲದ ಇಬ್ಬರು ಕೂಲಿ ಕಾರ್ಮಿಕರನ್ನು ನಗರ ಠಾಣೆ ಪೊಲೀಸರು ಬಂಧಿಸಿ, 500 ಗ್ರಾಂ ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡಿದ್ದಾರೆ. ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಹೋಬಳಿ ಬೆಟ್ಟದ ಮನೆಯ ಎಸ್ಟೇಟ್‌ವೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಅಮ್ಜದ್ ಅಲಿ, ಇದ್ರೀಸ್ ಅಲಿ ಬಂಧಿತ ಆರೋಪಿಗಳು.

ಅಸ್ಸಾಂ ಮೂಲದ ಕಾರ್ಮಿಕರನ್ನು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ದೂರು ಬಂದ ಹಿನ್ನಲೆ, ಡಿವೈಎಸ್ಪಿ ಎಸ್.ಕೆ.ಮಾಲತೇಶ್ ಮಾರ್ಗದರ್ಶನದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ವಿ.ಸಿ. ವನರಾಜು, ಸಬ್‌ಇನ್‌ಸ್ಪೆಕ್ಟರ್ ಮಹೇಶ್, ಸಿಬ್ಬಂದಿ ಪೃಥ್ವಿ, ರೇವಣ್ಣ, ಶ್ರೀಧರ್, ಸೋಮ ಶೇಖರ್, ಚಂದ್ರಕಾಂತ್, ಮಧು ಅವರಿದ್ದ ತಂಡ, ದಾಳಿ ನಡೆಸಿ ಪಟ್ಟಣದ ಎಪಿಎಂಸಿ ಬಳಿ ಆರೋಪಿಗಳನ್ನು ಗಾಂಜಾ ಸಮೇತ ವಶಕ್ಕೆ ಪಡೆದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ.

### ರಸ್ತೆ ಸಂಚಾರ ಬಂದ್ | ಬಾಣಾವರ ಐತಿಹಾಸಿಕ ಕೋಟೆ ರಕ್ಷಣೆಗೆ ಸ್ಥಳೀಯರ ಆಗ್ರಹ

## ಕುಸಿದು ಬಿದ್ದ ಕೋಟೆ ಬುರ್ಜು: ತಪ್ಪಿದ ಭಾರೀ ಅನಾಹುತ

• ಪ್ರಜೋದಯ ವರದಿ

**ಬಾಣಾವರ:** ಬಾಣಾವರ ಐತಿಹಾಸಿಕ ಕೋಟೆಯ ಬುರ್ಜು ಕಳೆದ ಕೆಲ ದಿನಗಳ ಹಿಂದೆ ಸುರಿದ ಧಾರಾಕಾರ ಮಳೆಯಿಂದಾಗಿಗುರುವಾರ ತಡ ರಾತ್ರಿ ಕುಸಿದು ಬಿದ್ದಿದೆ. ಅದೃಷ್ಟವ ಶಾತ್ ಅಲ್ಲಿರುವ ಮನೆಗಳಿಗೆ ಯಾವುದೇ ರೀತಿಯ ತೊಂದರೆ ಯಾಗಿಲ್ಲ.

ಈ ಸ್ಥಳ ಪ್ರತಿನಿತ್ಯ ಸಾರ್ವಜನಿಕರು ಓಡಾಡುವಂತಹ ಪ್ರದೇಶವಾಗಿದ್ದು, ಕಳೆದ ವಾರವಷ್ಟೇ ಸ್ವಲ್ಪ ಭಾಗದ ಬುರ್ಜು ಕುಸಿದು ಬಿದ್ದಿತ್ತು. ಆದರೆ, ಗುರುವಾರ ತಡರಾತ್ರಿ ದೊಡ್ಡ ಭಾಗದ ಬುರ್ಜು ಕುಸಿದು ಬಿದ್ದು, ರಸ್ತೆಯ ಮೇಲೆ ದೊಡ್ಡ ದೊಡ್ಡ ಬಂಡೆ ಕಲ್ಲುಗಳು ಹಾಗು ಮಣ್ಣಿನ ರಾಶಿ ಬಿದ್ದಿರುವುದರಿಂದ ಇಲ್ಲಿ ವಾಹನಗಳು ಮಾತ್ರವಲ್ಲದೆ ಸಾರ್ವಜನಿಕರು ಓಡಾಟ ಸ್ಥಗಿತಗೊಂಡಿದೆ.

ಬಾಣಾವರದ ಐತಿಹಾಸಿಕ ಕೋಟೆ ಮತ್ತು ಬುರ್ಜುಗಳನ್ನು ರಕ್ಷಿಸಿ, ಇತಿಹಾಸದ ಪಳವಳಿಕೆಗಳನ್ನು ಮುಂದಿನ



ಪೀಳಿಗೆಗೆ ಕೊಡುಗೆಯಾಗಿ ನೀಡಬೇಕೆಂದು ಪ್ರಾಚೀನ ಸ್ಮಾರಕ ಸಂರಕ್ಷಣಾ ಟ್ರಸ್ಟ್‌ನ ವತಿಯಿಂದ ಹಲವು ಬಾರಿ ಸಂಬಂಧಿತ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ.

ಪುರಾತತ್ವ ಇಲಾಖೆಯ ಆಯುಕ್ತರನ್ನು ಭೇಟಿ ಮಾಡಿ, ಕೋಟೆ ಮತ್ತು ಬುರ್ಜುಗಳನ್ನು ಸ್ಮಾರಕ ಸಂರಕ್ಷಣಾ ಪಟ್ಟಿಗೆ ಸೇರಿಸುವಂತೆ ಮನವಿ ಮಾಡಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಕೋಟೆ ಕುಸಿತವಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇವಲ ನೆಪಕ್ಕೆ ಒಂದೆರಡು ಬಾರಿ ಭೇಟಿ ನೀಡಿದ ಅಧಿಕಾರಿಗಳು ಇದುವರೆಗೂ ಸ್ಮಾರಕವನ್ನು ಸಂರಕ್ಷಣಾ ಪಟ್ಟಿಗೆ ಸೇರಿಸದೆ, ಸಬೂಬು ಹೇಳಿಕೊಂಡು ಕಾಲ ಹರಣ ಮಾಡುತ್ತಿದ್ದಾರೆ. ಈಗ ಬಿದ್ದಿರುವ ಬುರ್ಜು ಈ ಹಿಂದೆ ಬಿದ್ದಾಗ ಅಲ್ಲಿನ ಮನೆ ಹಾನಿ ಆದಂತಹ ಸಂದರ್ಭದಲ್ಲಿ ಐದು ಜನ ಸಂತ್ರಸ್ತರಿಗೆ ಸರ್ವೆ ನಂ.1ರಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಲು ನಿವೇಶನಗಳನ್ನು ನೀಡಲಾಗಿತ್ತು. ಆದರೆ, ಆ ಸ್ಥಳದಲ್ಲಿ 20 ವರ್ಷಗಳು ಕಳೆದರೂ ಸಹ ಯಾರೊಬ್ಬರು ಮನೆಗಳನ್ನು ನಿರ್ಮಿಸದೆ, ಕೆಲವರು ಆ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ.

### ಕ್ರಮ ಕೈಗೊಳ್ಳಲು ಆಗ್ರಹ

ಇನ್ನಾದರೂ ಸಂಬಂಧಿತ ಇಲಾಖೆಯ ಅಧಿಕಾರಿಗಳು ಮತ್ತು ಸಚಿವರು ಕೋಟೆ ಮತ್ತು ಬುರ್ಜುಗಳನ್ನು ರಕ್ಷಿಸಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಇತಿಹಾಸ ಸಾರುವ ಇಂತಹ ಪಳವಳಿಕೆಗಳನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಹಾಗು ಅಧಿಕಾರಿಗಳ ಕರ್ತವ್ಯವಾಗಿದೆ. ಅಧಿಕಾರಿಗಳು ತಕ್ಷಣ ಭೇಟಿ ನೀಡಿ ಈ ಬುರ್ಜುಗಳನ್ನು ಉಳಿ ಸುವ ಕಡೆ ಗಮನ ಹರಿಸಬೇಕು. ಪುರಾತನ ಐತಿಹಾಸಿಕ ಸ್ಮಾರಕವನ್ನು ರಕ್ಷಿಸದೆ ಹೋದರೆ, ನಮ್ಮ ಮುಂದಿನ ಪೀಳಿಗೆಗೆ ಕರ್ನಾಟಕದ ಇತಿಹಾಸವನ್ನು ತಿಳಿಸುವುದು ಕಷ್ಟವಾಗುತ್ತದೆ ಎಂದು ಪ್ರಾಚೀನ ಸ್ಮಾರಕ ಸಂರಕ್ಷಣಾ ಟ್ರಸ್ಟ್‌ನ ಗೌರವಾಧ್ಯಕ್ಷ ಬಿ.ರವಿಶಂಕರ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ.

## ಮುಂದಿನ ಐಪಿಎಲ್ ನಲ್ಲೂ ಚೆನ್ನೈ ಪರ ಆಡಲಿರುವ ಧೋನಿ

**ಚೆನ್ನೈ:** ಚೆನ್ನೈ ಸೂಪರ್ ಕಿಂಗ್ಸ್ ತಂಡದ ತಾರಾ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರು 2026ರಲ್ಲೂ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಸಿಎಸ್‌ಕೆ ತಂಡದಲ್ಲೇ ಮುಂದುವರೆಯಲಿದ್ದಾರೆಂದು ಮ್ಯಾನೇಜ್‌ಮೆಂಟ್ ಸ್ಪಷ್ಟಪಡಿಸಿದೆ.

ಮುಂದಿನ ಐಪಿಎಲ್‌ಗಾಗಿ 44 ವರ್ಷದ ಧೋನಿ ಅವರನ್ನು ಸಂಜು ಸ್ಯಾಮ್ಸನ್ ಜೊತೆ ಟ್ರೇಡ್ ಮಾಡಲಾಗುತ್ತದೆ ಎನ್ನುವ ವದಂತಿಗಳು ಹರಿದಾಡುತ್ತಿದ್ದವು. ಐಪಿಎಲ್ ಮುಂದಿನ ಆವೃತ್ತಿಗೆ ಧೋನಿ ಅವರು ಲಭ್ಯವಿರುವುದಾಗಿ ಸಿಇಒ ಕಾಶಿ ವಿಶ್ವನಾಥ ಅವರು ಸ್ಪಷ್ಟಪಡಿಸಿದ್ದಾರೆ.

ಐಪಿಎಲ್‌ನ 18ನೇ ಆವೃತ್ತಿಯಲ್ಲಿ ಋತುರಾಜ್ ಗಾಯಕವಾಡ್ ಅವರು ಸಿಎಸ್‌ಕೆ ತಂಡ ವನ್ನು ಮುನ್ನಡೆಸಿದ್ದರು. ಟೂರ್ನಿಯ ಮಧ್ಯದಲ್ಲಿ ಅವರು ಗಾಯಗೊಂಡು ತಂಡದಿಂದ ಹೊರಬಿದ್ದಿದ್ದರಿಂದ, ಉಳಿದ ಪಂದ್ಯ ಗಳಿಗೆ ಧೋನಿಯೇ ನಾಯಕರಾಗಿದ್ದರು. ಸಿಎಸ್‌ಕೆ ತಂಡವು ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿತ್ತು.

## ಜೀವನದ ಪ್ರತಿ ರಂಗದಲ್ಲೂ ರಾಜ್ಯಶಾಸ್ತ್ರ ಅವಶ್ಯಕ

• ಪ್ರಜೋದಯ ವರದಿ

**ಹಾಸನ:** ಒಂದೊಮ್ಮೆ ಬಹು ಬೇಡಿಕೆಯಲ್ಲಿದ್ದ ರಾಜ್ಯಶಾಸ್ತ್ರ ವಿಭಾಗ ಇಂದಿನ ತಂತ್ರಜ್ಞಾನ ಶಿಕ್ಷಣದ ಆಕರ್ಷಣೆಯಿಂದ ಯುವಜನತೆಯಲ್ಲಿ ಆಕರ್ಷಣೆ ಕಳೆದುಕೊಳ್ಳುತ್ತಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಗಂಗಾಧರ್ ಅವರು ತಿಳಿಸಿದರು.

ನಗರದ ಎ.ವಿ.ಕೆ. ಕಾಲೇಜು ಸಭಾಂಗಣದಲ್ಲಿ ರಾಜ್ಯಶಾಸ್ತ್ರ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ಶೈಕ್ಷಣಿಕ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಜೀವನದ ಪ್ರತಿಯೊಂದು ರಂಗದಲ್ಲಿ ರಾಜ್ಯಶಾಸ್ತ್ರ ಅಡಕವಾಗಿದೆ. ಅದನ್ನು ವಿದ್ಯಾರ್ಥಿಗಳು ಅರ್ಥ ಮಾಡಿ ಕೊಳ್ಳಬೇಕೆಂದು ಹೇಳಿದರು.

ಗುಣಮಟ್ಟದ ಶಿಕ್ಷಣದ ಬದಲು ನೂರು ಪ್ರತಿಶತ ಫಲಿತಾಂಶದ ನಿರೀಕ್ಷೆ ಹೊಂದಿದ್ದು, ಪಾಸಾಗಲು ಬೇಕಿರುವ ಕನಿಷ್ಠ ಅಂಕಗಳನ್ನು 35 ರಿಂದ 33ಕ್ಕೆ ಕಡಿತಗೊಳಿಸಿರುವುದು ಸರಿಯಾದ ಕ್ರಮವಲ್ಲ. ಅದರಿಂದಾಗಿ ಶಿಕ್ಷಣದ ಗುಣಮಟ್ಟ ಮತ್ತಷ್ಟು ಕುಸಿಯುತ್ತದೆ.



ಪ್ರಾಥಮಿಕ ಶಿಕ್ಷಣ ಮಕ್ಕಳಿಗೆ ಹೇರಿಕೆಯಾಗಿದೆ. ಅದರಿಂದ ಮಕ್ಕಳ ಬೌದ್ಧಿಕ ಬೆಳವಣಿಗೆ ಮೇಲೆ ಮಾರಕ ಪರಿಣಾಮ ಬೀರುತ್ತದೆ, ಶಿಕ್ಷಣ ಇಂದು ತೋರಿಕೆಯಾಗಿದೆ. ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲರಾಗುತ್ತಿರುವ ಬಗ್ಗೆ ಇಡೀ ಶಿಕ್ಷಕ ಸಮುದಾಯ ಆಲೋಚಿಸುವ ಅನಿವಾರ್ಯತೆ ಇದೆ ಎಂದು ಶಿಕ್ಷಕ ಸಮುದಾಯಕ್ಕೆ ಕಿವಿ ಮಾತು ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅವರು ಮಾತನಾಡಿ, ಹಾಸನದಲ್ಲಿ ಎಲ್ಲಾ ರೀತಿಯ ಶಿಕ್ಷಣ ಪಡೆಯುವ ಸೌಲಭ್ಯ ಇದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಬೇರೆ ಜಿಲ್ಲೆಗಳಿಗೆ ಹೋಗದೆ ಇಲ್ಲೇ ಉನ್ನತ ಶಿಕ್ಷಣ ಪಡೆಯಬೇಕೆಂದು ತಿಳಿಸಿದರು.

ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ ಸುರೇಶ್ ಮಾತನಾಡಿದರು. ಎ.ವಿ.ಕೆ. ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಯತೀಶ್ವರ್, ಮಂಗಳೂರು ಪಿ.ಯು. ಕಾಲೇಜು ಕಾರ್ಯದರ್ಶಿ ಕೆ.ಎಂ. ಲಕ್ಷ್ಮೀಕಾಂತ, ರಾಜ್ಯಶಾಸ್ತ್ರ ಪ್ರಾಂಶುಪಾಲರು, ಉಪನ್ಯಾಸಕರ ವೇದಿಕೆ ಅಧ್ಯಕ್ಷ ಶ್ರೀನಿವಾಸ್, ಪ್ರಶಾಂತ್ ಕುಮಾರ್, ಮಲ್ಲಿಗಮ, ಕುಸುಮ ಹಾಜರಿದ್ದರು.


## ಮುಂದಿನ ವರ್ಷ ಭಾರತಕ್ಕೆ ಡೊನಾಲ್ಡ್ ಟ್ರಂಪ್ ಭೇಟಿ

• ಪ್ರಜೋದಯ ವರದಿ

**ವಾಷಿಂಗ್ಟನ್:** ಭಾರತದೊಂದಿಗೆ ಮಾತುಕತೆ ಉತ್ತಮವಾಗಿ ಸಾಗುತ್ತಿದೆ ಎಂದಿರುವ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಿನ ವರ್ಷ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದಿದ್ದಾರೆ.

ಬಹುತೇಕ ಭಾರತದ ತೈಲ ಕಂಪನಿಗಳು ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸಿವೆ ಎಂದಿರುವ ಟ್ರಂಪ್, ಮೋದಿ ನನ್ನ ಸ್ನೇಹಿತ ಮತ್ತು ನಾವು ಮಾತನಾಡುತ್ತಿದ್ದೇವೆ.ನಾನು ಭಾರತಕ್ಕೆ ಬರಬೇಕೆಂದು ಅವರು ಬಯಸುತ್ತಾರೆ. ನಾನು ಹೋಗುತ್ತೇನೆ. ಮೋದಿ ಮಹಾನ್ ವ್ಯಕ್ತಿ. ನಾನು ಭಾರತಕ್ಕೆ ಭೇಟಿ ನೀಡುತ್ತೇನೆ ಎಂದಿದ್ದಾರೆ. ಇದೇ ವೇಳೆ, ಸುಂಕ ಹೇರುವ ಮೂಲಕ ಭಾರತ-ಪಾಕಿಸ್ತಾನದ ಯುದ್ಧವನ್ನು ನಿಲ್ಲಿಸಿದ್ದೇನೆಂದು ಟ್ರಂಪ್ ಪುನರುಚ್ಚರಿಸಿದ್ದಾರೆ.

ನಾನು 8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಸುಂಕ ನೀತಿಯಿಂದಾಗಿ ಐದು ಅಥವಾ ಆರು ಯುದ್ಧಗಳು ನಿಂತಿವೆ.



ಅದಕ್ಕೆ ಉದಾಹರಣೆ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷ ನಿಲ್ಲಿಸಿರುವುದು. ನೀವು ಹೋರಾಡಲು ಹೋದರೆ, ನಾನು ನಿಮ್ಮ ಮೇಲೆ ಸುಂಕಗಳನ್ನು ವಿಧಿಸುತ್ತೇನೆಂದು ಹೇಳಿದೆ. ಆದರೂ ಅವರು ಸಂಘರ್ಷಕ್ಕೆ ಇಳಿದರು.

ನಂತರ 24 ಗಂಟೆಗಳೊಳಗೆ, ನಾನು ಯುದ್ಧವನ್ನು ಇತ್ಯರ್ಥಪಡಿಸಿದೆ. ನಾನು ಸುಂಕ ವಿಧಿಸದಿದ್ದರೆ ಯುದ್ಧ ಇತ್ಯರ್ಥವಾಗುತ್ತಿರಲಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

## ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಧಾನಿಗೆ ಸಿ.ಎಂ. ಪತ್ರ: ಹೆಚ್.ಡಿ.ಕೆ. ಟೀಕೆ

• ಪ್ರಜೋದಯ ವರದಿ

**ಮೈಸೂರು:** ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿಗೆ ಪತ್ರ ಬರೆದಿದ್ದಾರೆ. ಯಾವ ಪುರುಷಾರ್ಥಕ್ಕೆ ಸರ್ಕಾರ ನಡೆಸುತ್ತಿದ್ದಾರೆ ಗೊತ್ತಿಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಹೆಚ್. ಡಿ. ಕುಮಾರಸ್ವಾಮಿ ಅವರು ಟೀಕಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿ ಜನಪ್ರತಿನಿಧಿಗಳು ಮತ್ತು ಸಕ್ಕರೆ ಕಾರ್ಖಾನೆಗಳ ಲಾಬಿಗೆ ಮುಖ್ಯಮಂತ್ರಿ ಮಣಿದಿದ್ದಾರೆ. ತಮ್ಮ ತಪ್ಪಿಗೆ ಪ್ರಧಾನಿ ಅವರನ್ನು ಇಕ್ಕಟಿಗೆ ಸಿಲುಕಿಸುವ ರಾಜಕೀಯ ಮಾಡುತ್ತಿದ್ದಾರೆ. ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ಯಾವ ರಾಜ್ಯದಲ್ಲಿ ಪ್ರಧಾನಿ ಮಧ್ಯಸ್ಥಿಕೆ ವಹಿಸಿದ್ದಾರೆಂದು ಪ್ರಶ್ನಿಸಿದರು.

ನಾನೂ ಎರಡು ಬಾರಿ ಸಿ.ಎಂ ಆಗಿದ್ದಾಗಲೂ ಕೇಂದ್ರ ಸರ್ಕಾರದ ಕಡೆ ನೋಡದೇ ಸಮಸ್ಯೆ ಬಗೆಹರಿಸಿದ್ದೇನೆ. ಕೇಂದ್ರವು ಈಗಾಗಲೇ ಎಫ್‌ಆರ್‌ಪಿ ದರ ನಿಗದಿ ಮಾಡಿದೆ. ರೈತರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಸಭೆ ನಡೆಸಿದ್ದರೆ ಇಂಥಹ ಸ್ಥಿತಿ ಬರುತ್ತಿರಲಿಲ್ಲ. ಗ್ಯಾರಂಟಿ ಯೋಜನೆ ಉಸ್ತುವಾರಿಗಳಿಗೆ ಸಂಪುಟ ದರ್ಜೆ ಸ್ಥಾನ ನೀಡಿ ದುಂದುವೆಚ್ಚ ಮಾಡುವ ಬದಲು ಅದನ್ನು ರೈತರಿಗೆ ನೀಡಬಹುದಿತ್ತು. ಹಣದ ಕೊರತೆ ಇದ್ದರೆ ಅದನ್ನು ಹೇಳುವುದರ ಬದಲು ಕೇಂದ್ರದ ಕಡೆ ಬೊಟ್ಟು ಮಾಡುವುದು ಸರಿಯಲ್ಲ ಎಂದರು.

ಬೆಳಗಾವಿಯಲ್ಲಿ ಜೆಡಿಎಸ್‌ನ ಯಾರೊಬ್ಬರು ಸಕ್ಕರೆ ಕಾರ್ಖಾನೆ ಹೊಂದಿಲ್ಲ. ಬಂಡೆಪ್ಪ ಕಾಶೆಂಪುರ ತಮ್ಮ ಕಾರ್ಖಾನೆ ಮಾರಾಟ ಮಾಡಿದ್ದಾ ರೆಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.



**ಕ್ರಾಂತಿ, ವಾಂತಿ ಆಗಲ್ಲ:** ನಮ್ಮ ಪಕ್ಷದಲ್ಲಿದ್ದಾಗಲೇ ಸಿದ್ದರಾಮಯ್ಯ ಅವರ ಗುಣವೇನೆಂದು ಗೊತ್ತಿದೆ. ನವೆಂಬರ್ ನಲ್ಲಿ ಯಾವ ಕ್ರಾಂತಿಯೂ ಆಗೊಲ್ಲ. ವಾಂತಿಯೂ ಆಗಲ್ಲ. ಡಿ.ಕೆ.ಶಿವಕುಮಾರ್ ಅವರು ಮುಖ್ಯ ಮಂತ್ರಿ ಆಗುವ ಬಗ್ಗೆ ದೇವರೊಂದಿಗೆ ಯಾವಾಗಲೂ ಚರ್ಚಿಸುತ್ತಾರೆ. ದೇವರು ಅವರಿಗೆ ಏನು ಹೇಳಿದ್ದಾನೊ ನನಗೇನು ಗೊತ್ತು ಎಂದು ಹೇಳಿದರು.

## ನ.11 ರಂದು ಜನಸ್ಪಂದನಾ ಸಭೆ

**ಹಾಸನ:** ಸಾರ್ವಜನಿಕ ಕುಂದು ಕೊರತೆ ಅಹವಾಲನ್ನು ದಾಖಲಿಸಲು ಸರ್ಕಾರವು ಏಕೀಕೃತ ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ತಾಲ್ಲೂಕು ಮಟ್ಟದ ಸಾರ್ವಜನಿಕ ಕುಂದುಕೊರತೆ ಸಭೆಯನ್ನು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನ.11 ರಂದು ಮಧ್ಯಾಹ್ನ 1 ಗಂಟೆಯಿಂದ ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಆಯೋಜಿಸಲಾಗಿದೆ.

ಸದರಿ ದಿನದಂದು ಸಾರ್ವಜನಿಕರು ಖುದ್ದು ಹಾಜರಾಗಿ ಮನವಿಗಳನ್ನು ನೀಡಲು ತೆರೆಯಲಾದ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ದಾಖಲಿಸಿಕೊಂಡು ಟೋಕನ್ ನಂಬರ್‌ಗಳನ್ನು ಸ್ವೀಕರಿಸಿ ತಮ್ಮ ಅಹವಾಲನ್ನು ಸಲ್ಲಿಸಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

### ಕೆರೆ ಅಚ್ಚುಕಟ್ಟು ಪ್ರದೇಶ ಜಲಾವೃತ | ಅನ್ನದಾತರು ಕಂಗಾಲು | ಪರಿಹಾರಕ್ಕೆ ಆಗ್ರಹ

## ಅತಿವೃಷ್ಟಿ: ಹತ್ತಿ, ಸೂರ್ಯಕಾಂತಿ ಬೆಳೆ ನಾಶ

• ಪ್ರಜೋದಯ ವರದಿ

**ಬೇಲೂರು:** ಮುಂಗಾರು ಆರಂಭದಿಂದ ಹಿಂಗಾರು ಹಂಗಾಮಿನ ಮಧ್ಯದವರೆಗೂ ತಾಲ್ಲೂಕಿನಾದ್ಯಂತ ಸುರಿದ ಸತತ ಮಳೆಯಿಂದ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದ ಹತ್ತಿ, ಜೋಳ, ಸೂರ್ಯಕಾಂತಿ ಹಾಗೂ ಶುಂಠಿ ಬೆಳೆಯು ಶೀತದ ಪ್ರಭಾವಕ್ಕೆ ಕೊಳೆತು ಹೋಗಿದ್ದು, ನೂರಾರು ಎಕರೆ ಅಡಿಕೆ ಮರಗಳಿಗೂ ಹಾನಿಯಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಮೂರು ಸಾವಿರಕ್ಕೂ ಅಧಿಕ ಹೆಕ್ಟೇರ್ ವಲಯದಲ್ಲಿ ಬಿತ್ತನೆಯಾಗಿದ್ದ ಹತ್ತಿ ಬೆಳೆಯು ಅತಿ ವೃಷ್ಟಿಯಿಂದ ಕೈಕೊಟ್ಟಿದ್ದು, ಹೂವಾಗದೆ ಕಾಯಿಯ ಹಂತದಲ್ಲೇಉದುರಿಹೋಗಿದೆ. ಜೋಳ ಹಾಗೂ ಸೂರ್ಯಕಾಂತಿ ಬೆಳೆಯು ಹೊಲದಲ್ಲೇ ಕರಗಿ ಹೋಗು ತ್ತಿದೆ. ಕೆಲವೆಡೆ ಹತ್ತಿ ಬಿಡಿಸುವ ಹಂತ ದಲ್ಲಿ ಆರ್ಭಟಿಸಿದ ಹಿಂಗಾರು ಮಳೆಯು ಇಡೀ ಹೊಲದ ಇಳುವರಿ ಯನ್ನು ಆಪೋಶನ ತೆಗೆದುಕೊಂಡಿದೆ. ಶುಂಠಿಗೆ ಉತ್ತಮ ಬೆಲೆ ಸಿಗುತ್ತಿದ್ದರೂ, ಬಿಳಿಸುಳಿ ರೋಗದ ಪರಿಣಾಮ ನಿರೀಕ್ಷಿ ಸಿದಷ್ಟು



ಬೆಳೆಯು ಕೈಗೆ ಸಿಗದೆ ನಷ್ಟ ಅನುಭವಿಸುವಂತಾಗಿದೆ. ಕಳೆದ ಐದು ದಿನದಿಂದ ಮಳೆಯು ಇಳಿಮುಖವಾಗಿ ಬಿಸಿಲು ಏರುತ್ತಿರುವುದು ರೈತರಲ್ಲಿ ಸ್ವಲ್ಪ ಸಮಾಧಾನ ತಂದಿದೆ.

ಈಗಾಗಿರುವ ನಷ್ಟವನ್ನು ಪರಿಹರಿಸಿಕೊಳ್ಳುವುದು ಹೇಗೆ ಎಂದು ರೈತರು ಚಿಂತಿತರಾಗಿದ್ದಾರೆ. ಅನಾವೃಷ್ಟಿಯ ಕಾಲದಲ್ಲಿ ಅಂತರ್ಜಲ ಬಳಸಿ, ನೀರು ಹಾಯಿಸಿ ಬೆಳೆ ಕಾಪಾಡಿಕೊಂಡು ವ್ಯವಹಾರ ಮಾಡುತ್ತಿದ್ದೆವು. ಈಗ ಸತತ ಆರು ತಿಂಗಳು ಸುರಿದ ಮಳೆಗೆ ಹೊಲದೊಳಗೆ ಕಾಲಿ ಡಲೂ ಆಗದ ಸ್ಥಿತಿ ನಿರ್ಮಾಣವಾಯಿತು. ಹಳೇಬೀಡಿನ ದ್ವಾರಸಮುದ್ರ ಕೆರೆಯು ಆರು ತಿಂಗಳಿಂದಲೂ ತುಂಬಿ ರಭಸವಾಗಿ ಹರಿಯುತ್ತಿದೆ. ಕೆರೆಯ ಪಾತ್ರದ ತೋಟ, ಗದ್ದೆಗಳು ಜಲಾವೃತವಾಗಿ, ಶೀತ ಪೀಡಿತವಾಗಿದೆ.

ಟೊಮಾಟೊ ಗಿಡಗಳು ನೆಲ ಕಚ್ಚಿದ್ದು, ಮೋಡಕವಿದ ವಾತಾವರಣ ಇರುವುದರಿಂದ ಮತ್ತೆ ಮೇಲೇಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಸತತವಾಗಿ ಸುರಿದ ಮಳೆಯ ಪರಿಣಾಮ ರೈತರು ತೆಂಗು ಹಾಗೂ ಬಾಳೆ ತೋಟಗಳಿಗೆ ಕಾಲಿಡಲು ಸಾಧ್ಯ ವಾಗಲಿಲ್ಲ. ಪರಿಣಾಮ ಮರದಿಂದ ಉದುರಿದ ಕಾಯಿ ಆರಿಸಲೂ ಆಗದೆ ಅಲ್ಲೇ ಕೊಳೆತು ಹೋಗಿವೆ. ಬಾಳೆ ಬೆಳೆಯುವವರು ಊಟದ ಎಲೆಗಳಿಗಾಗಿ ಗಿಡಗಳನ್ನು ಬಹುಕಾಲ ಕಾಪಾಡುತ್ತಾರೆ. ಸಾವಿರ ಸಂಖ್ಯೆಯಲ್ಲಿ ಎಲೆಗಳನ್ನು ಕೊಯ್ಯಲು ಗುತ್ತಿಗೆ ಕೊಟ್ಟು, ವ್ಯವಹಾರ ನಡೆಸುತ್ತಾರೆ. ಪ್ರಸ್ತುತ ಮಳೆ ಹಾಗೂ ಗಾಳಿಯ ಹೊಡೆತಕ್ಕೆ ಎಲೆಗಳು ಹರಿದುಹೋಗಿರುವುದರಿಂದ ಆ ಉದ್ಯ ಮಕ್ಕೂ ಹೊಡೆತ ಬಿದ್ದಿದೆ. ಬಾಳೆ ಗೊನೆಗಳು ಬಲಿಯುವ ಮೊದಲೇ ಉದುರಿಹೋಗಿವೆ. ತರಕಾರಿ ಬೆಳೆಯು ವವರ ಪಾಡು ಇನ್ನಷ್ಟು ಕಠಿಣವಾಗಿದ್ದು, ವಿಪರೀತ ಮಳೆಗೆ ಯಾವ ಬೆಳೆ ಮಾಡಬೇಕು ಎಂಬ ಗೊಂದಲದಲ್ಲೇ ಹಂಗಾಮು ಮುಗಿದುಹೋಗಿದೆ. ಹಳೇ ಬೀಡು-ಮಲ್ಲಾಪುರ ರಸ್ತೆಯಲ್ಲಿರುವ ಬಿದುರುಕೆರೆಯೂ ಹಿಂಗಾರು ಮಳೆಯ ರಭಸಕ್ಕೆ ಕಳೆದ ವಾರದಿಂದ ತುಂಬಿ ಹರಿಯುತ್ತಿದ್ದು, ಕೆರೆಯ ಪಾತ್ರದ ತೋಟಗಳು ಜಲಾವೃತವಾಗಿದೆ.

ದ್ವಾರಸಮುದ್ರ ಕೆರೆಯ ಕೋಡಿ ಹಳ್ಳದ ಅಂಚಿನಲ್ಲಿ ದಶಕಗಳಿಂದ ಶೆಡ್ ನಿರ್ಮಿಸಿಕೊಂಡು ವಾಸವಿರುವ ನಿರಾಶ್ರಿತರಿಗೆ, ಆರು ತಿಂಗಳಿಂದ ಹಳ್ಳದಲ್ಲಿ ರಭಸವಾಗಿ ಹರಿಯುತ್ತಿರುವ ನೀರು ತೀವ್ರ ಆತಂಕವನ್ನು ತಂದೊಡ್ಡಿದೆ. ಹಳ್ಳದಂಚಿನ ಭೂಮಿಯು ನೀರಿನ ಒರತೆಯಿಂದ ಕುಸಿಯುತ್ತಿದ್ದು, ಅತಿವೃಷ್ಟಿಯ ಪರಿಣಾಮ ಅಪಾಯದ ಮುನ್ಸೂಚನೆ ನೀಡುತ್ತಿದೆ. 2009ರ ಅಂತ್ಯ ಭಾಗದಲ್ಲಿ ಸುರಿದ ಭಾರಿ ಮಳೆಗೆ ದ್ವಾರಸಮುದ್ರ ಕೆರೆಯು ತುಂಬಿ ಕೋಡಿಹಳ್ಳದಲ್ಲಿ ನೀರು ರಭಸವಾಗಿ ಹರಿದ ಪರಿಣಾಮ ಮೂರು ಮನೆಗಳು ಕೊಚ್ಚಿಹೋಗಿದ್ದವು. ಈಗ ಅದೇ ರೀತಿಯ ಪರಿಸ್ಥಿತಿ ಉದ್ಭವಿಸಿದ್ದು, ಮುಂದಿನ ದಿನಗಳಲ್ಲಿ ಮತ್ತೆ ಮಳೆ ಸುರಿದರೆ ಅಪಾಯ ನಿಶ್ಚಿತ ಎಂಬ ಆತಂಕ ನಿವಾಸಿಗಳಲ್ಲಿ ಮನೆಮಾಡಿದೆ. ನಿರಾಶ್ರಿತರಿಗೆ ಒಂಟೆಮಳ್ಳಿಯ ಗುಡ್ಡದ ಬಳಿಯ ಸರ್ವೆ ನಂಬರ್ 263ರ ಸರ್ಕಾರಿ ಜಾಗದಲ್ಲಿ ಪುನರ್ವಸತಿ ಕಲ್ಪಿಸಬೇಕೆಂಬ ವಿಚಾರ ಮೂರು ವರ್ಷದ ಹಿಂದೆ ಮುನ್ನೆಲೆಗೆ ಬಂದಿತ್ತು. ಇಲ್ಲಿಯವರೆಗೂ ಯಾರೂ ಅದರ ಬಗ್ಗೆ ಯೋಚಿಸಿಲ್ಲ ಎಂದು ಬೂದಿಗುಂಡಿ ನಿರಾಶ್ರಿತರು ಹೇಳುತ್ತಾರೆ. ಕಳೆದ ವಾರ ಸುರಿದ ಹಿಂಗಾರು ಮಳೆಯ ಹೊಡೆತಕ್ಕೆ ಈ ಪ್ರದೇಶದಲ್ಲಿ ನಿರ್ಮಿಸಿಕೊಂಡಿದ್ದ ಎರಡು ಮನೆಗಳು ಕುಸಿದ ಬಿದ್ದಿವೆ.

## ಮಗಳ ಸಾವಿಗೆ ಕಾರಣವಾದ ಆರೋಪಿ ಬಂಧನಕ್ಕೆ ಆಗ್ರಹ

### ಪ್ರಿಯಕರನ ಕಿರುಕುಳಕ್ಕೆ ಯುವತಿ ಸಾವು ಪ್ರಕರಣ | ಕುಟುಂಬಸ್ಥರ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಕಿರುಕುಳ ನೀಡಿ ಮಗಳ ಸಾವಿಗೆ ಕಾರಣವಾದ ಆರೋಪಿಯನ್ನು ಬಂಧಿಸುವಂತೆ ಮೃತ ಯುವತಿಯ ಕುಟುಂಬಸ್ಥರು ಕಣ್ಣೀರಿಟ್ಟು ಮನವಿ ಮಾಡಿದ್ದಾರೆ.

ತಾಲ್ಲೂಕಿನ ಜಾಗರವಳ್ಳಿ ಗ್ರಾಮದ ಜಯರಾಮ್ ನಾಯಕ್ ಹಾಗು ಶೋಭಾ ದಂಪತಿ ಪುತ್ರಿ ಪ್ರಿಯಾಂಕ (21) ಎಂಬ ಯುವತಿ ವಾರದ ಹಿಂದೆ ಪ್ರಿಯಕರನ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಳು. ಆಲೂರು ತಾಲ್ಲೂಕಿನ ಕಲ್ಕೆರೆಪೇಟೆ ಗ್ರಾಮದ ಸುಮಂತ್ (20) ಯುವತಿ ಸಾವಿಗೆ ಕಾರಣವಾದ ಆರೋಪಿ.

9 ತಿಂಗಳ ಹಿಂದೆ ತನ್ನ ಮಗಳೊಂದಿಗೆ ಉದ್ಯೋಗ ಹಿನ್ನಲೆ ಬೆಂಗಳೂರಿನ ನೆಲಗದರಹಳ್ಳಿಯಲ್ಲಿ ಯುವತಿ ಹಾಗು ಕುಟುಂಬ ಸದಸ್ಯರು ವಾಸವಾಗಿದ್ದರು. ಈ ನಡುವೆ ಸಂಬಂಧಿಕನೇ ಆಗಿರುವ ಸುಮಂತ್ ಮತ್ತು ಪ್ರಿಯಾಂಕ ನಡುವೆ ಪ್ರೀತಿ ಬೆಳೆದು ಮೂರು ತಿಂಗಳಿನಿಂದ ಪರಸ್ಪರ ಪ್ರೀತಿಸುತ್ತಿದ್ದರು.

ಈ ವೇಳೆ ಪ್ರಿಯಾಂಕಳನ್ನು



ಅನುಮಾನದಿಂದ ನೋಡುತ್ತಿದ್ದ ಆರೋಪಿ ಸುಮಂತ್, ಬಾಯಿಗೆ ಬಂದಂತೆ ಆಕೆಯನ್ನು ನಿಂದಿಸುತ್ತಿದ್ದ ಎಂದು ಪೋಷಕರು ಆರೋಪಿಸಿದ್ದಾರೆ. ಇವರಿಬ್ಬರ ಪ್ರೀತಿ ಮನೆಯವರಿಗೆ ತಿಳಿಯುತ್ತಿದ್ದಂತೆ, ಮಗಳಿಗೆ ತಂದೆ-ತಾಯಿ ಬುದ್ಧಿವಾದ ಹೇಳಿದ್ದರು. ಆದರೆ, ಅವರ ಮಾತನ್ನು ಕೇಳದ ಮಗಳು ಕುಟುಂಬದಿಂದಲೇ ದೂರ ಉಳಿದು ತನ್ನ ಪ್ರಿಯಕರನೊಂದಿಗೆ ಮಾತುಕತೆ ಮುಂದುವರಿಸಿದ್ದರು.

ಅ.30ರಂದು ಪ್ರಿಯಾಂಕ ಜೊತೆ ಜಗಳವಾಡಿದ್ದ ಪ್ರಿಯಕರ. ಅವಳನ್ನು ಮನಬಂದಂತೆ ನಿಂದಿಸಿ, ನೀನು ಬದುಕಿರುವುದು ವ್ಯರ್ಥ ಸಾಯಬೇಕೆಂದು ಆಕೆಗೆ ಪೀಡಿಸುತ್ತಿದ್ದ. ಅಲ್ಲದೆ ನನ್ನ ಜೊತೆ ಮಾತನಾಡುತ್ತಿರುವಾಗಲೇ ನೀನು ಆತ್ಮಹತ್ಯೆಗೆ ಶರಣಾಗಬೇಕೆಂದು ಪ್ರಚೋದನೆ ನೀಡಿರುವ ಆಡಿಯೋ ಕೂಡ ಲಭ್ಯವಾಗಿದೆ.

ಪ್ರಿಯಕರನ ಕಿರುಕುಳ ಸಹಿಸಿಕೊಳ್ಳಲಾಗದೆ ತಾನು ವಾಸವಾಗಿದ್ದ ಬೆಂಗಳೂರಿನ ನೆಲಗದರಹಳ್ಳಿಯ ಬಾಡಿಗೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಕುರಿತು ಬೆಂಗಳೂರಿನ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಗಳು ಮೃತಪಟ್ಟು ವಾರ ಕಳೆದರೂ ಈವರೆಗೂ ಆರೋಪಿಯನ್ನು ಬಂಧಿಸಿಲ್ಲ. ಆತ ಊರಿನಲ್ಲೇ ಓಡಾಡಿಕೊಂಡಿದ್ದಾನೆ. ಕೂಡಲೇ ಆತನನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಯುವತಿಯ ಪೋಷಕರು ಒತ್ತಾಯಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019